CC-O. In Public Domain. Digitized by eGangotri

581

ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳು

ಮಂಡ್ಯ ಜಿಲ್ಲೆ

ಬಿ. ಗೋ. ರಮೇಶ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

76° 15′ ರಿಂದ 77° 20′ ವರೆಗೆ ವಿಸ್ತರಿಸಿದೆ. ಜಿಲ್ಲೆಯಲ್ಲಿ 10 ಪಟ್ಟಣಗಳೂ, ಏಳು ತಾಲ್ಲೂಕುಗಳೂ ಇವೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 4,961 ಚದರ ಕಿ. ಮೀ.ಗಳು. ಕೃಷ್ಣರಾಜಪೇಟೆ (ಕೆ. ಆರ್. ಪೇಟೆ), ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ಇವು ಏಳು ತಾಲ್ಲೂಕುಗಳು. ಈ ತಾಲ್ಲೂಕುಗಳ ವಿಸ್ತೀರ್ಣ, ಗ್ರಾಮಗಳ ಸಂಖ್ಯೆ ಹಾಗೂ ಅಲ್ಲಿ ಆಗುವ ಮಳೆಯ ಪರಿಮಾಣವನ್ನು ಕೋಷ್ಟಕ 1ರಲ್ಲಿ ಕೊಡಲಾಗಿದೆ.

ಮಂಡ್ಯ ಜಿಲ್ಲೆಯ ಬಹಳಷ್ಟು ಭಾಗ ಸಮತಟ್ಟಾದ ಬಯಲು ಪ್ರದೇಶಗಳಿಂದ ಕೂಡಿದೆ. ಜಿಲ್ಲೆಯ ಉತ್ತರ, ಪಶ್ಚಿಮ ಹಾಗೂ ಪೂರ್ವ ಭಾಗಗಳು ಮೈದಾನ ಪ್ರದೇಶ. ಅಲ್ಲಲ್ಲಿ ಸಣ್ಣ ಬೆಟ್ಟಗಳೂ ಹೆಚ್ಚು ಎತ್ತರವಲ್ಲದ ಬೆಟ್ಟ ಶ್ರೇಣಿಗಳೂ ಇವೆ. ಇಡೀ ಜಿಲ್ಲೆಯ ಪ್ರದೇಶ ಸಮುದ್ರ ಮಟ್ಟದಿಂದ ಸುಮಾರು 765 ರಿಂದ 914 ಮೀಟರ್ ಎತ್ತರದಲ್ಲಿದೆ.

ಕೋಷ್ಟಕ 1 : ಮಂಡ್ಯ ಜಿಲ್ಲೆಯ ತಾಲ್ಲೂಕುಗಳ ವಿಸ್ತೀರ್ಣ, ಗ್ರಾಮಗಳ ಸಂಖ್ಯೆ ಹಾಗೂ ಮಳೆಯ ಪರಿಮಾಣ

ಕ್ರಮ ಸಂಖ್ಯೆ	ತಾಲ್ಲೂಕು	ವಿಸ್ತೀರ್ಣ (ಚದರ ಕಿ. ಮೀ.)	ಗ್ರಾಮಗಳು	ಮಳೆ (ವಾರ್ಷಿಕ ಸರಾಸರಿ ಮಿ. ಮೀ.ಗಳಲ್ಲಿ)
1.	ಕೆ.ಆರ್.ಪೇಟೆ	906.3	317	500
2.	ಮದ್ದೂರು	681	161	670
3.	ಮಳವಳ್ಳಿ	804	186	635.88
4.	ಮಂಡ್ಯ	715.1	183	859.8
5.	ನಾಗಮಂಗಲ	1040	365	598
6.	ಪಾಂಡವಪುರ	533	175	600.71
7.	ಶ್ರೀರಂಗಪಟ್ಟಣ	346.7	97	547.4

CC-O. In Public Domain. Digitized by eGangotri Vidyabharathi Book Centre, Sringeri

 CC-O. In Public Domain. Digitized by eGangotri

ಮಂಡ್ಯ ಜಿಲ್ಲೆಯ ಜನಸಂಖ್ಯೆ 1981–82ರ ಅಂಕಿ ಅಂಶಗಳ ಪ್ರಕಾರ 14,14,383. ಇವರಲ್ಲಿ ಗಂಡಸರ ಸಂಖ್ಯೆ 7,21,663. ಹೆಂಗಸರ ಸಂಖ್ಯೆ 6,92,720. ಹರಿಜನರು 1,41,439, ಗಿರಿಜನರು 2,795.

ಮಣ್ಣು, ಹವಾಗುಣ

ವರ್ಷಪೂರ್ತಿ ಜಿಲ್ಲೆಯ ಹವಾಗುಣ ಹಿತಕರವಾಗಿರುತ್ತದೆ. ಬೆಂಗಳೂರು ಮತ್ತು ಮೈಸೂರುಗಳಲ್ಲಿರುವಂತೆಯೇ ಇಲ್ಲಿ ವಾಯು ಗುಣವಿದೆ. ಜಿಲ್ಲೆಯ ಉಷ್ಣಾಂಶಗಳಲ್ಲಿ ಅಂತಹ ವಿರುಪೇರು ಗಳಿರುವುದಿಲ್ಲ. ಮಾರ್ಚ್‌ನಿಂದ ಮೇ ವರೆಗೆ ಬಿಸಿಲುಕಾಲ. ಜೂನ್ ನಿಂದ ಆಗಸ್ಟ್ ವರೆಗೆ ಮುಂಗಾರು ಮಳೆ ಆಗುತ್ತದೆ. ನವೆಂಬರ್ ನಿಂದ ಜನವರಿ ವರೆಗೆ ಚಳಿಗಾಲವಿರುತ್ತದೆ.

ಜಿಲ್ಲೆಯು ವ್ಯವಸಾಯ ಯೋಗ್ಯ ಭೂಮಿಯನ್ನು ಪಡೆದಿದೆ. ಒಳ್ಳೆ ಫಲವತ್ತಾದ ಭೂಮಿ. ಕೆಂಪು ಜೇಡಿ ಮಣ್ಣು ಮತ್ತು ಮರಳು ಮಿಶ್ರಿತ ಕೆಂಪು ಜೇಡಿಮಣ್ಣು ಇದೆ. ಕೆ. ಆರ್. ಪೇಟೆ ತಾಲ್ಲೂಕು ಮರಳು ಮಿಶ್ರಿತ ಕೆಂಪುಮಣ್ಣಿನ ಪ್ರದೇಶವನ್ನು ಹೆಚ್ಚಾಗಿ ಪಡೆದಿದೆ. ಕೆಲಕಡೆಗಳಲ್ಲಿ ಜೇಡಿಮಣ್ಣಿನ ನೆಲವಿದೆ. ಉಳಿದಂತೆ ಬಂಜರು ಪ್ರದೇಶ ಹೆಚ್ಚು. ಇಡೀ ಜಿಲ್ಲೆಯಲ್ಲಿ ದೊಡ್ಡ ತಾಲ್ಲೂಕು ನಾಗಮಂಗಲ. ಇಲ್ಲಿನ ಭೂಮಿ ಮುಖ್ಯವಾಗಿ ಮರಳು ಮಿಶ್ರಿತ. ಎಲ್ಲೋ ಸ್ವಲ್ಪ ಕೆಂಪುಮಣ್ಣನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಇಲ್ಲಿ ನೀರಿನ ಅಭಾವ ಹೆಚ್ಚಾಗಿದ್ದು ವ್ಯವಸಾಯಕ್ಕೆ ಅನುಕೂಲಗಳು ಕಡಮೆ. ಕೆರೆ, ಬಾವಿ ನೀರೇ ಆಧಾರ. ಮಂಡ್ಯ ತಾಲ್ಲೂಕು ಹೆಚ್ಚಾಗಿ ಮರಳು ಮಿಶ್ರಿತ ಕೆಂಪು ಜೇಡಿಮಣ್ಣಿನ ಭೂಮಿಯಿಂದ ಕೂಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದ್ದೂರು ತಾಲ್ಲೂಕಿನಲ್ಲಿ ಕೆಂಪುಮಣ್ಣಿನ ಭೂಮಿಯನ್ನು ಕಾಣುತ್ತೇವೆ. ಕೆರೆ ಹಾಗೂ ನಾಲೆ ನೀರಾವರಿ ಸೌಕರ್ಯದಿಂದಾಗಿ ವ್ಯವಸಾಯ ಕುದುರಿದೆ. ಮಳವಳ್ಳಿ ತಾಲ್ಲೂಕಿನ ಹೆಚ್ಚು ಭಾಗ ಒರಟು ಮರಳು ಮತ್ತು ಜೇಡಿ ಮಿಶ್ರಿತ ಕೆಂಪುಮಣ್ಣಿನ ಭೂಮಿ. ಮಳೆ ಇಲ್ಲಿ ಕಡಿಮೆ. ಭೂಮಿಯೂ ಅಷ್ಟೇನೂ ಫಲವತ್ತಿರುವುದಿಲ್ಲ. ಕಾಲುವೆ ಪ್ರದೇಶದ ಜೇಡಿಮಣ್ಣು ಕೆಲಮಟ್ಟಿಗೆ ಫಲವತ್ತಾಗಿದೆ. ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಕಾವೇರಿ ನದಿ ಹರಿಯುತ್ತದೆ. ಕಾವೇರಿ ಹಾಗೂ ಲೋಕಪಾವನಿ ನದಿಗಳ ನೀರು ಇಲ್ಲಿ ವ್ಯವಸಾಯಕ್ಕೆ ಬಳಕೆಯಾಗುತ್ತದೆ. ಕಾಲುವೆ ನೀರಾವರಿ ಸೌಕರ್ಯವೂ ಇದ್ದು ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಕೆಂಪು ಜೇಡಿ ಮಿಶ್ರಿತ ಮಣ್ಣು ಇದೆ.

ಜಲಸಂಪನ್ಮೂಲಗಳು

ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರ ವೈಷ್ಣವಿ ಈ ಜಿಲ್ಲೆಯ ಮುಖ್ಯ ನದಿಗಳು. ಇವಲ್ಲದೆ ಹೆಬ್ಬಳ್ಳ, ಹಂದಿಹಳ್ಳ, ಭೀಮಾ, ಬಿಂಡೇನಹಳ್ಳಿ ತೊರೆ ಮೊದಲಾದ ಕಿರು ತೊರೆಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಕೆರೆ, ನೀರಾವರಿ ಬಾವಿಗಳೂ ಇವೆ. ಅಂತರ್ಜಲ ಸಂಪತ್ತು ಸುಮಾರಾಗಿ ಇರುತ್ತದೆ. ಮುಖ್ಯ ಜಲಸಂಪನ್ಮೂಲ ಮಳೆ.

ಕಾವೇರಿ ಕರ್ನಾಟಕದ ಪುಣ್ಯ ನದಿ. ಇದರ ಉಗಮ ಕೊಡಗು ಜಿಲ್ಲೆಯ ಮಡಕೇರಿ ತಾಲ್ಲೂಕಿನ ಭಾಗಮಂಡಲದ ಹತ್ತಿರ ಬ್ರಹ್ಮಗಿರಿ ಬೆಟ್ಟದಲ್ಲಿ. ಕಾವೇರಿ ಅಲ್ಲಿಂದ ಮಡಕೇರಿ ತಾಲ್ಲೂಕಿನ ಬಾವಲಿಯವರೆಗೆ ಹರಿದು ಈಶಾನ್ಯ ದಿಕ್ಕಿನಲ್ಲಿ ವೀರ ರಾಜಪೇಟೆ ತಾಲ್ಲೂಕಿನ ಉತ್ತರ ಗಡಿಯಾಗಿ ಹರಿಯುತ್ತದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಅನಂತರ ಕೊಡಗಿನ ಪೂರ್ವ ಅಂಚಿನ ಸೋಮವಾರಪೇಟೆ ತಾಲ್ಲೂಕಿನ ಶಿರಂಗಾಲದವರೆಗೂ ಹರಿದು ಹಾಸನ ಜಿಲ್ಲೆಯ ಮುಖಾಂತರ ಹರಿದು ಮೈಸೂರು ಜಿಲ್ಲೆಯ ಚುಂಚನಕಟ್ಟೆಯಲ್ಲಿ ಜಲಪಾತವನ್ನು ಸೃಷ್ಟಿಸಿ ಕೃಷ್ಣರಾಜನಗರದ ಮೂಲಕ ಕೃಷ್ಣರಾಜಸಾಗರದ ಮೇಲುಗಡೆ ಪ್ರವೇಶಿಸುತ್ತದೆ. ಅನಂತರ ರಂಗನತಿಟ್ಟು, ಶ್ರೀರಂಗಪಟ್ಟಣ ದ್ವೀಪಗಳನ್ನು ಬಳಸಿ ಮೈಸೂರು ಜಿಲ್ಲೆಯತ್ತ ಸಾಗುತ್ತದೆ. ಮತ್ತೆ ಆಗ್ನೇಯ ಅಂಚಿನಲ್ಲಿ ಮಳವಳ್ಳಿ ಮತ್ತು ಕೊಳ್ಳೇಗಾಲ ತಾಲ್ಲೂಕುಗಳ ಗಡಿಯಾಗಿ ಹರಿಯುತ್ತದೆ. ಈ ಭಾಗದಲ್ಲಿ ಶಿವಸಮುದ್ರ ದ್ವೀಪವನ್ನು ಬಳಸಿ ಹರಿಯುತ್ತದೆ. ಶಿವಸಮುದ್ರ, ಮಳವಳ್ಳಿ ತಾಲ್ಲೂಕಿನ ದಕ್ಷಿಣ ಗಡಿಯಲ್ಲಿದೆ. ಈ ಸ್ಥಳದಲ್ಲಿ ಕಾವೇರಿ ಎರಡು ಶಾಖೆಗಳಾಗಿ ರೂಪುಗೊಂಡು ಎರಡೂ ಶಾಖೆಗಳು ಸುಮಾರು 105 ಮೀಟರ್ ಎತ್ತರದಿಂದ ಜಲಪಾತಗಳಾಗಿ ಧುಮುಕುತ್ತವೆ. ಇವುಗಳಲ್ಲಿ ಪಶ್ಚಿಮ ಶಾಖೆಯನ್ನು ಗಗನಚುಕ್ಕಿ ಜಲಪಾತವೆಂದೂ ಇಲ್ಲಿಂದ ಒಂದೂವರೆ ಕಿ. ಮೀ. ದೂರದಲ್ಲಿನ ಪೂರ್ವ ಶಾಖೆಯನ್ನು ಭರಚುಕ್ಕಿ ಎಂದೂ ಹೇಳುತ್ತಾರೆ. ಈ ಎರಡೂ ಪ್ರಪಾತಗಳ ನಂತರ ಕಾವೇರಿ ನದಿ ಮತ್ತೆ ಒಂದಾಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ.

ಹೇಮಾವತಿ ನದಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಹುಟ್ಟಿ ಹಾಸನ ಜಿಲ್ಲೆಯ ಮುಖಾಂತರ ಹರಿದು ಬಂದು ಮಂಡ್ಯಜಿಲ್ಲೆಯನ್ನು ಕೆ. ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿ ಹೋಬಳಿಯ ಗುಡ್ಡೆ ಹೊಸಹಳ್ಳಿಯ ಬಳಿ ಪ್ರವೇಶಿಸಿ ಕೃಷ್ಣರಾಜಸಾಗರದ ಉತ್ತರದಲ್ಲಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಕಾವೇರಿಯ ಒಂದು ಮುಖ್ಯ ಉಪನದಿ ಹೇಮಾವತಿ. ಲೋಕಪಾವನಿಯೂ ಕಾವೇರಿಯ ಒಂದು ಉಪನದಿ. ನಾಗಮಂಗಲ ತಾಲ್ಲೂಕಿನ ಹೊನಕೆರೆ ಹೋಬಳಿಯ ಸಾತೇನಹಳ್ಳಿ ಬೆಟ್ಟದ ಜೌಗು

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharati Book Centre, Sringeri

CC-O. In Public Domain. Digitized by eGangotri



ಶೃಂಗೇರಿ ಶಾರದಾ ಪೀಠ

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂಮಿಯಲ್ಲಿ ಹುಟ್ಟುತ್ತದೆ. ಪಾಂಡವಪುರ ತಾಲ್ಲೂಕಿನತ್ತ ಹರಿಯುವಾಗ ಗವಿರಂಗಪ್ಪನ ಹಳ್ಳ, ಇಂಬಡಿ ದಾಸನಹಳ್ಳ, ಕಣಿವೆಕೆರೆ ಹಳ್ಳ, ಬಾಳಾರಪ್ಪನ ಹಳ್ಳ, ಮೊಸರ ಹಳ್ಳ ಈ ಸಣ್ಣ ಪುಟ್ಟ ತೊರೆಗಳನ್ನು ಕೂಡಿಸಿಕೊಳ್ಳುತ್ತದೆ. ಪಾಂಡವಪುರಕ್ಕೆ ಪೂರ್ವದಲ್ಲಿ ದಕ್ಷಿಣಾಭಿಮುಖವಾಗಿ ಹರಿದು, ಮೋತಿತಲಾಬ್ (ಮುತ್ತಿನಕೆರೆ)ನಿಂದ ಹರಿಯುವ ಹಳ್ಳವನ್ನು ಸೇರಿಸಿಕೊಂಡು ಶ್ರೀರಂಗಪಟ್ಟಣ ತಾಲ್ಲೂಕಿನ ಕರಿಘಟ್ಟ ತಪ್ಪಲ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಶಿಂಷಾ ನದಿಯ ಹುಟ್ಟು ತುಮಕೂರು ಜಿಲ್ಲೆಯ ದೇವರಾಯನ ದುರ್ಗದಲ್ಲಿ. ಅಲ್ಲಿಂದ ಕ್ಷೀಣಗಲು ತಾಲ್ಲೂಕಿನ ಮೂಲಕ ಹರಿದು ಮದ್ದೂರಿನ ಕಿರಂಗೂರಿನ ಬಳಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಇದಕ್ಕೆ ಮದ್ದೂರು ಹೊಳೆ ಎಂದೂ ಹೇಳುತ್ತಾರೆ. ಮದ್ದೂರು ತಾಲ್ಲೂಕನ್ನು ದಾಟಿ ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತ ಮಳವಳ್ಳಿ ತಾಲ್ಲೂಕನ್ನು ಪ್ರವೇಶಿಸಿ ಶಿವಸಮುದ್ರ ಜಲಪಾತಗಳಿಗೆ ಸ್ವಲ್ಪ ಮುಂದೆ ಕಾವೇರಿಯಲ್ಲಿ ಐಕ್ಯವಾಗುವುದು. ವೀರವೈಷ್ಣವಿ ಶಿಂಷಾದ ಉಪನದಿ. ನಾಗಮಂಗಲ ತಾಲ್ಲೂಕಿನಲ್ಲಿ ಹರಿಯುತ್ತದೆ.

ಜಿಲ್ಲೆಯ ಕೆರೆಗಳಲ್ಲಿ ಪಾಂಡವಪುರ ತಾಲ್ಲೂಕಿನ ಮುತ್ತಿನ ಕೆರೆ ಅಥವಾ ತೊಣ್ಣೂರು ಕೆರೆ, ನಾಗಮಂಗಲ ತಾಲ್ಲೂಕಿನ ಹೆರಗೋನಹಳ್ಳಿ ಕೆರೆ, ಸಿಂದಘಟ್ಟದ ಕೆರೆ, ಅಘಾಲಯ ಕೆರೆ ಇವು ಮುಖ್ಯವಾಗಿವೆ. ಮದ್ದೂರು ಕೆರೆ, ಕೊಪ್ಪ ಕೆರೆ ಇತರ ಕೆರೆಗಳು.

ಮಂಡ್ಯ ಜಿಲ್ಲೆಯ ಬೆಟ್ಟಗಳು

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಎತ್ತರದ ಬೆಟ್ಟಗಳಿಲ್ಲ. ಜಿಲ್ಲೆಯ ದಕ್ಷಿಣದ ಭಾಗದಲ್ಲಿ ಸಣ್ಣ ಬೆಟ್ಟಶ್ರೇಣಿ ಇದೆ.

Sri Vidyaranyapi Book Centre, Bangalore

CC-O. In Public Domain. Digitized by eGangotri

ಮಳವಳ್ಳಿ ತಾಲ್ಲೂಕಿನ ಪೂರ್ವದ ಕಡೆಗೆ ಕೆಲವು ಬೆಟ್ಟಗಳಿವೆ. ಶ್ರೀರಂಗಪಟ್ಟಣದ ಸಮೀಪದಲ್ಲಿ ಮತ್ತು ವಿಶ್ವೇಶ್ವರಯ್ಯ ನಾಲೆಯ ಹರವಿನಲ್ಲಿ ಉದ್ದಕ್ಕೆ ಕೆಲವು ಗಮನ ಸೆಳೆಯುವ ಶ್ರೇಣಿ ಇವೆ. ಉಳಿದ ಕಡೆಗಳ ಬೆಟ್ಟ ಗುಡ್ಡಗಳು ತೀರ ಸಣ್ಣವು. ಮಂಡ್ಯ ಜಿಲ್ಲೆಯ ಕೆಲವು ಬೆಟ್ಟಗಳು ಹೀಗಿವೆ.

1. ಆದಿಚುಂಚನಗಿರಿ ಬೆಟ್ಟ

ನಾಗಮಂಗಲ ತಾಲ್ಲೂಕಿನಲ್ಲಿ ಬೆಳ್ಳೂರಿನ ಉತ್ತರಕ್ಕೆ ಮಾಯಸಂದ್ರಕ್ಕೆ ಹೋಗುವ ಹಾದಿಯಲ್ಲಿ 10 ಕಿ.ಮೀ. ದೂರದಲ್ಲಿ ಈ ಬೆಟ್ಟವಿದೆ. ಚುಂಚನಗಿರಿ ಪ್ರದೇಶ ನಿಸರ್ಗ ಸೌಂದರ್ಯಕ್ಕೆ ಹೆಸರಾಗಿದೆ. ಇದೊಂದು ಯಾತ್ರಾಸ್ಥಳವೂ ಆಗಿದೆ. ಸಮುದ್ರಮಟ್ಟದಿಂದ 1060 ಮೀಟರ್ ಎತ್ತರದಲ್ಲಿರುವ ಗಿರಿಯ ಸುತ್ತ ಮುತ್ತಲೂ ದಟ್ಟವಾದ ಅರಣ್ಯವಿದೆ. ಬೆಟ್ಟ ಹತ್ತಲು ಈ ಅರಣ್ಯವನ್ನು ಹಾದುಹೋಗಬೇಕು. ಗಿರಿಯ ಎರಡು ಶಿಖರಗಳು ಚೋಳೂರ ಕಂಬ ಹಾಗೂ ಗಳಿಗೆಗಲ್ಲು. ಗಿರಿಯ ಮೇಲೆ, ಸುತ್ತ ಮುತ್ತ ಅನೇಕ ಪ್ರೇಕ್ಷಣೀಯ ತಾಣಗಳಿವೆ.

2. ಕಬ್ಬಾಳದುರ್ಗ

ಮಳವಳ್ಳಿ ತಾಲ್ಲೂಕಿನ ಒಂದು ಬೆಟ್ಟ. ಸಮುದ್ರಮಟ್ಟದಿಂದ 1069 ಮೀಟರ್ ಎತ್ತರದಲ್ಲಿದೆ. ಇದೊಂದು ಕಡಿದಾದ ಬೆಟ್ಟ. ಶಂಕುವಿನಾಕಾರದಲ್ಲಿದೆ. ಬೆಟ್ಟದ ಮೇಲೆ ಒಂದು ಕೋಟೆ ಇದೆ.

3. ಮೇಲುಕೋಟೆ ಬೆಟ್ಟ

ಪಾಂಡವಪುರ ತಾಲ್ಲೂಕಿನ ಬೆಟ್ಟ. ಬೆಟ್ಟದ ಮೇಲೆ ಊರೂ ಇದೆ. ಸಮುದ್ರಮಟ್ಟದಿಂದ 1013 ಮೀಟರ್ ಎತ್ತರದ ಗಿರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಕ್ತಿ. ಶ್ರೀರಂಗಪಟ್ಟಣಕ್ಕೆ ಸಮೀಪದ ಕರಿಘಟ್ಟ ಹಾಗೂ ಸಿಂಧಘಟ್ಟದ ಬಳಿಯ ನಾರಾಯಣದುರ್ಗ ಇತರ ಪ್ರಮುಖ ಬೆಟ್ಟಗಳು.

ಇಡೀ ಜಿಲ್ಲೆಯ ಒಂದೇ ಪರ್ವತಶ್ರೇಣಿ ಎಂದರೆ ಜಿಲ್ಲೆಯ ಆಗ್ನೇಯ ದಿಕ್ಕಿಗಿರುವ ಭಾಗದಲ್ಲಿನ ಬಿಳಿಗಿರಿರಂಗನಬೆಟ್ಟ ಸಾಲಿನ ಮುಂದುವರಿದ ಕೆಲವು ಬೆಟ್ಟಗಳಷ್ಟೆ. ಸಂಪನ್ಮೂಲಗಳ ದೃಷ್ಟಿಯಿಂದ ಈ ಬೆಟ್ಟಗಳು ಅಷ್ಟೇನೂ ಮಹತ್ವದ್ದೆನಿಸಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ವ್ಯವಸಾಯ

ಜಿಲ್ಲೆಯ ಮುಖ್ಯ ಬೆಳೆಗಳಲ್ಲಿ ಬತ್ತ ಮತ್ತು ಕಬ್ಬಿಗೆ ಅಗ್ರ ಸ್ಥಾನ. ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಪ್ರಥಮ ಸ್ಥಾನವನ್ನು ಬೆಳಗಾವಿ ಜಿಲ್ಲೆ ಪಡೆದುಕೊಂಡಿದೆ. ಅಲ್ಲಿ 25,500 ಹೆಕ್ಟೇರುಗಳಿಗೂ ಹೆಚ್ಚು ವಿಸ್ತೀರ್ಣದಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಮಂಡ್ಯ ಜಿಲ್ಲೆಗೆ ಎರಡನೆ ಸ್ಥಾನ. ಮಂಡ್ಯ ಜಿಲ್ಲೆಯಲ್ಲಿ ಈ ಕ್ಷೇತ್ರ ಸುಮಾರು 20,000 ಹೆಕ್ಟೇರುಗಳು. ಕಬ್ಬನ್ನು, ಕಬ್ಬಿನ ಜಲ್ಲೆಯ ತುಂಡುಗಳನ್ನು ವರ್ಷದ ಯಾವ ಕಾಲದಲ್ಲಾದರೂ ನೆಟ್ಟು ಬೆಳೆಸಬಹುದಾಗಿದೆ. ಕಬ್ಬಿಗೆ ಬೀಜವೂ ಇದೆ. ಒಳ್ಳೆ ಫಲವತ್ತಾದ ಭೂಮಿ ಅಗತ್ಯ. ಕಬ್ಬು ಮುಖ್ಯವಾಗಿ ಸಕ್ಕರೆ ಬೆಳೆ. ಸಿ.ಒ. 419, ಐಸಿ 225, ಸಿ.ಒ. 740, ಎಚ್. 7045, ಸಿ.ಒ. 62175, ಸಿ.ಒ 6415 ಮತ್ತು ಬಿ 37172 ನಮ್ಮ ರಾಜ್ಯದಲ್ಲಿ ಮುಖ್ಯವಾದ ತಳಿಗಳು. ಕಬ್ಬಿನಿಂದ ಬೆಲ್ಲ, ಸಕ್ಕರೆ, ಕಾಕಂಬಿ, ಕಲ್ಲುಸಕ್ಕರೆಗಳನ್ನು ತಯಾರಿಸುತ್ತಾರೆ. ಕಬ್ಬಿನ ಸಿಪ್ಪೆ ಕಾಗದ ತಯಾರಿಕೆಗೆ ಒದಗುತ್ತದೆ. ತರಗು ಉತ್ತಮ ಗೊಬ್ಬರವಾಗುತ್ತದೆ. ಹೀಗಾಗಿ ಕಬ್ಬು ಬಹು ಉಪಯೋಗಿ. ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆ ಒಂದು ವರದಾನ. ಇಲ್ಲಿನ ಪ್ರತಿ ತಾಲ್ಲೂಕುಗಳಲ್ಲೂ ಕಬ್ಬಿನ ಬೆಳೆ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಡ್ಯ ಜಿಲ್ಲೆಯಲ್ಲಿ ನಾಲೆ ಪ್ರದೇಶಗಳು ಹೆಚ್ಚಾಗಿದ್ದು ಬತ್ತದ ಬೆಳೆಗೆ ನೀರಾವರಿ ಸೌಕರ್ಯ ಒದಗಿದೆ.

ಜಿಲ್ಲೆಯ ಇತರ ಮುಖ್ಯ ಬೆಳೆಗಳು ರಾಗಿ, ಜೋಳ, ದ್ವಿದಳ ಧಾನ್ಯಗಳು, ಸ್ವಲ್ಪಮಟ್ಟಿಗೆ ತೆಂಗು, ನೆಲಗಡಲೆ, ಮೆಣಸಿನಕಾಯಿ, ಬಾಳೆ, ಹಿಪ್ಪನೇರಳೆ, ಹರಳು, ತರಕಾರಿ ಬೆಳೆಗಳು. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಹರಳನ್ನು ಬೆಳೆಯಲಾಗುತ್ತದೆ. ಮದ್ದೂರು, ಮಳವಳ್ಳಿ ತಾಲ್ಲೂಕುಗಳಲ್ಲಿ ಹಿಪ್ಪನೇರಳೆ ಬೇಸಾಯ ವಿಶೇಷವಾಗಿ ಇದೆ. ಕೆ. ಆರ್. ಪೇಟೆ ತಾಲ್ಲೂಕು ಹಿಪ್ಪನೇರಳೆ ಬೇಸಾಯವನ್ನು ವಿಸ್ತರಿಸಿದೆ. ನಾಗಮಂಗಲ ತಾಲ್ಲೂಕಿನಲ್ಲಿ ನೀರಾವರಿ ಬಾವಿಗಳ ಸಹಾಯದಿಂದ ಬತ್ತ, ಕಬ್ಬುಗಳನ್ನು ಬೆಳೆಯುತ್ತಾರೆ. ಹುರುಳಿ, ತೊಗರಿ, ಜೋಳ, ಬಾಳೆ, ಮೆಣಸಿನಕಾಯಿ ಹಾಗೂ ಸ್ವಲ್ಪ ಪ್ರಮಾಣದಲ್ಲಿ ತೆಂಗು ಈ ತಾಲ್ಲೂಕಿನ ಇತರ ಬೆಳೆಗಳು. ಪಾಂಡವಪುರ ತಾಲ್ಲೂಕು ವ್ಯವಸಾಯ ಪ್ರಧಾನವಾದ ಪ್ರದೇಶ. ಮಂಡ್ಯ ಜಿಲ್ಲೆಯಲ್ಲಿನ ವೈಜ್ಞಾನಿಕ ಬೇಸಾಯ ಪದ್ಧತಿಯನ್ನು ಈ ತಾಲ್ಲೂಕಿಗೂ ವಿಸ್ತರಿಸಲಾಗಿದೆ. ಪರಿಷ್ಕೃತ ಉತ್ತಮ ಬೀಜಗಳ ಬಿತ್ತನೆ, ರಾಸಾಯನಿಕ ಗೊಬ್ಬರಗಳ ಹತೋಟಿಯ ಬಳಕೆ, ಆಧುನಿಕ ಕೃಷಿ ಉಪಕರಣಗಳ ಬಳಕೆ ಇದೀಗ ಬೇಸಾಯ ಪದ್ಧತಿಯಲ್ಲಿ ಆಗಿರುವ ನೂತನ ವಿಧಾನ. ವ್ಯವಸಾಯದ ಪ್ರಗತಿಗೆ ಇವು ನೆರವಾಗಿವೆ. ಮಳವಳ್ಳಿ ತಾಲ್ಲೂಕಿನಲ್ಲಿ ರಾಗಿ, ಬತ್ತ, ಜೋಳ ಮುಖ್ಯ ಬೆಳೆಗಳಾಗಿವೆ. ಶ್ರೀರಂಗಪಟ್ಟಣ ತಾಲ್ಲೂಕಿನ ತೋಟಗಳಲ್ಲಿ ತೆಂಗು, ಹಣ್ಣಿನ ಗಿಡಗಳನ್ನು ಬೆಳೆಯುತ್ತಾರೆ.

ರೇಷ್ಮೆ ವ್ಯವಸಾಯ

1982–83ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 36,237

Sri Vidyabharathi Book Centre, Sringeri

CC-O. In Public Domain. Digitized by eGangotri



ಅಧುನಿಕ ಬಸ್ಸು ನಿಲ್ದಾಣ, ಮಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಕರೆಗಳಷ್ಟು ಭೂಮಿಯಲ್ಲಿ ಹಿಪ್ಪನೇರಳೆ ವ್ಯವಸಾಯ ಮಾಡಲಾಯಿತು. ಕಾವೇರಿ, ಲೋಕಪಾವನಿ, ಶಿಂಷಾ ಮತ್ತು ವೀರವೈಷ್ಣವೀ ನದಿಗಳಿಂದ ಉಪಯುಕ್ತವಾಗಿರುವ ಮಂಡ್ಯ ಜಿಲ್ಲೆ ಅತ್ಯಧಿಕ ಪ್ರಮಾಣದಲ್ಲಿ ಕೆಂಪುಮಣ್ಣು ಮತ್ತು ಮರಳು ಮಿಶ್ರಿತ ಕೆಂಪುಮಣ್ಣಿನ ಭೂಮಿಯನ್ನು ಹೊಂದಿದ್ದು ರೇಷ್ಮೆ ಬೇಸಾಯಕ್ಕೆ ಉತ್ತಮವೆನಿಸಿದೆ. ಗುಡಿ ಕೈಗಾರಿಕೆಯಾದ ರೇಷ್ಮೆ ಕೃಷಿಯು ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೂ ವ್ಯಾಪಿಸಿದೆ. ಮಂಡ್ಯ, ಮದ್ದೂರು, ಕಾಳಮುದ್ದನದೊಡ್ಡಿ, ಮಳವಳ್ಳಿ, ಹಲಗೂರು, ಬೆಳಕವಾಡಿ ಮೆತ್ತು ಪೂರಿಗಾಲಿಯಲ್ಲಿ ಸರ್ಕಾರಿ ರೇಷ್ಮೆ ಬಿತ್ತನೆ ಕೋರಿಗಳಿವೆ. ಜಿಲ್ಲೆಯಲ್ಲಿ ಕೈಮಗ್ಗ ಪ್ರಧಾನ ಕಸುಬಾಗಿದೆ. ಪ್ರತಿವರ್ಷ 10,000 ಟನ್ ರೇಷ್ಮೆ ಗೂಡುಗಳನ್ನು ಉತ್ಪಾದಿಸಲಾಗುತ್ತಿದೆ. ಸರ್ಕಾರಿ ಹಿಪ್ಪನೇರಳೆ ಸಸಿ ಪೋಷಣೆ ಮತ್ತು ತರಬೇತಿ ಕೇಂದ್ರ ಮದ್ದೂರಿನಲ್ಲಿದೆ. ಮೇಲುಕೋಟೆ, ತಳಗವಾಡಿ, ಕೊಡೆಯಾಲ, ಹೊಸಹೊಳಲು, ಕಿಕ್ಕೇರಿ ಇಲ್ಲಿ ತಯಾರಾಗುವ ರೇಷ್ಮೆ ಉತ್ಪನ್ನಗಳು ಉತ್ತಮವೆನ್ನಲಾಗಿದೆ. ಹಿಪ್ಪನೇರಳೆ ಎಲೆಗಳು ರೇಷ್ಮೆ ಹುಳುಗಳ ಆಹಾರ. ಹಿಪ್ಪನೇರಳೆಯ ಗುಣಮಟ್ಟವನ್ನು ಇಳುವರಿಯನ್ನು ಹೆಚ್ಚಿಸಿ ರೇಷ್ಮೆ ಉತ್ಪಾದನೆಗೆ ಶ್ರಮಿಸಬೇಕೆಂಬುದು ಪ್ರಸ್ತುತ ಇರುವ ಉದ್ದೇಶ.

ಪಶುಸಂಪತ್ತು

ಮಂಡ್ಯ ಜಿಲ್ಲೆ ಪಶುಸಂಪತ್ತಿಗೆ ಹೆಸರಾಗಿದೆ. ಹೆಚ್ಚು ಹಾಲು ನೀಡುವ ಮಿಶ್ರ ತಳಿಯ ರಾಸುಗಳಾದ 'ರೆಡ್ ಡೇನ್', 'ಜರ್ಸೀ' ಹಾಗೂ ಫ್ರೀಜಿಯನ್ ತಳಿಗಳ ಹಸುಗಳನ್ನು ಈ ಜಿಲ್ಲೆಯಲ್ಲಿ ಹೆಚ್ಚಾಗಿ ಕಾಣುತ್ತೇವೆ. ಜಿಲ್ಲಾ ಪಶುಸಂಗೋಪನಾಧಿಕಾರಿ ಕೆ. ಆರ್.

CC-O. Vidyaranya Book Centre, Sringeri

CC-O. In Public Domain. Digitized by eGangotri

ಪೇಟೆ, ಕುರಿ ಸಾಕಣೆಗೆ ಹೆಸರಾಗಿದೆ. ಕೆ. ಆರ್. ಪೇಟೆಯಲ್ಲಿ ಬನ್ನೂರು ಜಾತಿಯ ಕುರಿಗಳನ್ನು ಸಾಕುತ್ತಾರೆ. ದೇಶೀತಳಿಗಳಲ್ಲಿ ಬನ್ನೂರ ತಳಿ ವಿಶ್ವಖ್ಯಾತಿಯಾಗಿದೆ. ಮಾಂಸದ ಪ್ರಮಾಣಕ್ಕೂ ರುಚಿಗೂ ಈ ತಳಿ ಪ್ರಸಿದ್ಧ. ಮಳವಳ್ಳಿ ತಾಲ್ಲೂಕು ಈ ತಳಿಯ ತವರು. ಇವುಗಳ ಬೆಳವಣಿಗೆ ತೀವ್ರಗತಿಯದು. ನಾಗಮಂಗಲ ತಾಲ್ಲೂಕಿನಲ್ಲಿ ಕುರಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಾಕುವುದು ಮುಖ್ಯ ಕಸುಬು.

ಮದ್ದೂರು ತಾಲ್ಲೂಕಿನ ವಿಶ್ವೇಶ್ವರಯ್ಯ ನಾಲೆಯ ಫಾರಂ ಒಂದು ಬೇಸಾಯ ಕ್ಷೇತ್ರ. ಆಧುನಿಕ ಬೇಸಾಯ ಕ್ರಮಗಳನ್ನು ಕುರಿತು ಇಲ್ಲಿ ರೈತರಿಗೆ ತಜ್ಞರಿಂದ ಮಾರ್ಗದರ್ಶನ ನೀಡಲಾಗುತ್ತದೆ. ಇಲ್ಲಿನ ಒಂದು ವಿಶೇಷವೆಂದರೆ ಕೋಳಿ ಸಾಕಣೆ. ವೈಜ್ಞಾನಿಕವಾಗಿ ಪುಷ್ಟಿಕರ ಆಹಾರ ಕೊಟ್ಟು ಉತ್ತಮ ತಳಿಯ ಕೋಳಿಗಳನ್ನು ಸಾಕುವ ಆಧುನಿಕ ವಿಧಾನವನ್ನು ಇಲ್ಲಿ ತಿಳಿಸಿಕೊಡಲಾಗುತ್ತದೆ. ಈ ಫಾರಂ ಶಿವಾರ ಗುಡ್ಡದ ಬಳಿ ಇದೆ.

ಪಶುಪಾಲನೆ ಜಿಲ್ಲೆಯ ಮುಖ್ಯ ಕಸುಬು. ಹಾಲು ಹಯನು ಉತ್ಪಾದನೆ ವಿಶೇಷವಾಗಿ ಇದೆ. ಜಿಲ್ಲೆಯಲ್ಲಿ ಹಳ್ಳಿಕಾರ್ ಹಸುಗಳೂ ಇವೆ. ನಾಗಮಂಗಲದ ಕರಡಿಹಳ್ಳಿ ಈ ತಳಿ ಹಸುಗಳಿಗೆ ಪ್ರಸಿದ್ಧ. ಜಿಲ್ಲೆಯಲ್ಲಿ ಪಶುವೈದ್ಯ ಸಂಸ್ಥೆಗಳೂ, ಕೃತಕ ಗರ್ಭಧಾರಣಾ ಕೇಂದ್ರಗಳಿವೆ. ಮಳವಳ್ಳಿಯಲ್ಲೂ ಕೋಳಿಫಾರಂ ಇದೆ. ಜಿಲ್ಲೆಯಲ್ಲಿ ಹಂದಿ ಸಾಕಣೆ ಕೆಲಮಟ್ಟಿಗಿದೆ. ಇತ್ತೀಚಿನ ವರ್ಷಗಳಲ್ಲಿ ಇದೊಂದು ಲಾಭದಾಯಕವಾದ ಉದ್ಯಮವಾಗಬಹುದೆಂದು ರೈತರಿಗೆ ತಿಳಿಸಲಾಗುತ್ತಿದೆ.

ಕರ್ನಾಟಕದಲ್ಲಿ ಕುರಿ ಅಭಿವೃದ್ಧಿಯ ಉದ್ದೇಶದಿಂದ ನಾಗಮಂಗಲ, ಮಳವಳ್ಳಿಗಳಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳನ್ನು ರೈತರಿಗಾಗಿ ಮೀಸಲಿಟ್ಟಿದೆ. ಮೇಲುಕೋಟೆ ತಾಲ್ಲೂಕಿನ

CC-O. Sri Vidyaranya Sanskrit Research Institute and Sri Vidyaranya Sanskrit Book Centre, Sringeri.

CC-O. In Public Domain. Digitized by eGangotri



ಪಾಪಶ್ಯಾಂ ಬಂಗಿ ಇಪಾಯ ಗೆಜ್ಜಲಗೆರೆ ಹಾಲು ಉತ್ಪಾದಕರ ಸಂಘ

Sri Vidyabharathi Book Centre, Sringeri

 CC-O. In Public Domain. Digitized by eGangotri

ಧಂಗೂರು ಹಳ್ಳಿಯಲ್ಲಿ 600 ಎಕರೆ ಭೂಮಿಯಲ್ಲಿ ಕುರಿ ತಳಿ ಅಭಿವೃದ್ಧಿ ಕೇಂದ್ರವಿದೆ. ಕುರಿಗಳ ಉಣ್ಣೆಯ ಗುಣ ಮತ್ತು ಪ್ರಮಾಣವನ್ನು ಪೈಜ್ಲಾನಿಕ ತಳಿ ಎಬ್ಬಿಕೆಗಳಿಂದ ಉತ್ತಮಗೊಳಿಸುವುದು ಈ ಯೋಜನೆಯ ಉದ್ದಿಶ್ಯವಾಗಿದೆ.

1981–82ರ ಅಂಕಿ ಅಂಶಗಳ ಪ್ರಕಾರ, ಮಂಡ್ಯ ಜಿಲ್ಲೆಯ ಪಶುಸಂಪತ್ತಿನ ವಿವರ ಈ ಕೆಳಗಿನಂತಿದೆ—

ದನಗಳು 362458, ಎಮ್ಮೆಗಳು 167630, ಕುರಿಗಳು 372050, ಮೇಕೆಗಳು 146076, ಹಂದಿಗಳು 7050, ಇತರೆ ಜಾನುವಾರು 2872, ಕೋಳಿಗಳು 699779.

(ಕೃಪೆ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು)

ಪಶುಸಂಪತ್ತು ನಿಸರ್ಗದ ವರ. ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಪಶುಗಳ ಕೊಡುಗೆ ಅಪಾರ. ಮಾಂಸ, ಹಾಲು, ಕೋಳಿಮೊಟ್ಟೆ ಇವೇ ಮೊದಲಾದ ಆಹಾರಗಳು ಚರ್ಮ, ಉಣ್ಣೆ, ಮೂಳೆ ಇವುಗಳು ಹಾಗೂ ಅವುಗಳ ಮಲಮೂತ್ರಗಳು ತುಂಬಾ ಉಪಯುಕ್ತ. ಹಸು, ಎಮ್ಮೆ, ಕುರಿ, ಕೋಳಿ ಇವುಗಳ ಸಗಣಿಯನ್ನು ಗೊಬ್ಬರ ಅನಿಲ ಘಟಕಗಳಲ್ಲಿ ಬಳಸಿ ಅಡುಗೆ ಇಂಧನ ಮಿಥೇನ್ ಹಾಗೂ ಉತ್ತಮ ಗೊಬ್ಬರವನ್ನು ಪಡೆಯಬಹುದಾಗಿದೆ. ಯಾವುದೇ ಪಶುಸಂಪತ್ತಿರಲಿ ಅದು ಆರ್ಥಿಕವಾಗಿ ಲಾಭ ತರುತ್ತದೆ. ರೈತರು ಪಶುಗಳಿಗೆ ಉತ್ತಮ ಮೇವು, ಪುಷ್ಟಿಕರ ಆಹಾರ ನೀಡಿ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳುವುದು ಒಂದು ಕಸುಬು ಕೂಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೀನುಗಾರಿಕೆ

ಮೀನು ಒಂದು ಉತ್ತಮ ಪ್ರೋಟೀನ್ ಭರಿತ ಆಹಾರ. ಮೀನುಗಾರಿಕೆ ಉದ್ಯಮ ನೈಸರ್ಗಿಕವಾಗಿ ಒದಗಿರುವ ಉದ್ಯಮ ಕೂಡ. ಒಳನಾಡ ಮೀನುಗಾರಿಕೆಗೆ ರಾಜ್ಯದಲ್ಲಿ 26 ಸರೋವರ ಹಾಗೂ ಜಲಾಶಯಗಳು, 3000ದಷ್ಟು ದೊಡ್ಡ ಕೆರೆಗಳು 30,000 ಸಣ್ಣ ಕೆರೆಗಳು, ಹಲವು ಹತ್ತು ನದಿ, ಕಾಲುವೆಗಳು ಆಸರೆಯಾಗಿವೆ. ಕರ್ನಾಟಕದಿಂದ ರಫ್ತಾಗುವ ವಸ್ತು ಮೀನೂ ಒಂದು. ಒಣಮೀನು, ಮೀನೆಣ್ಣೆ, ಮೀನಿನ ಆಹಾರಗಳು ಇವು ಮೀನಿನ ಉತ್ಪಾದನೆಗಳು. ಮೀನಿನ ಕೃಷಿಯನ್ನು ಹೊಸ ವಿಧಾನಗಳನ್ನನುಸರಿಸಿ ಮಾಡಬಹುದಾಗಿದೆ. ಈ ವಿಧಾನದಲ್ಲಿ ಉಪಯುಕ್ತ ಮೀನುಗಳನ್ನು ನೈಸರ್ಗಿಕ ಕೊಳ, ಕೆರೆಗಳಲ್ಲಿ ಆಹಾರವನ್ನು ಕೊಟ್ಟು ಬೆಳಸಬಹುದಾಗಿದೆ. ಮೀನುಗಾರಿಕೆ ಫಾರಂಗಳನ್ನು ಬೆಳೆಸುವುದೂ ಒಂದು ವಿಧಾನ.

ಮಂಡ್ಯ ಜಿಲ್ಲೆಯಲ್ಲಿ ಜಲಾಶಯಗಳೂ, ಕೆರೆಗಳೂ ಇದ್ದು ಮತ್ಸ್ಯೋದ್ಯಮಕ್ಕೆ ನೆರವಾಗಿದೆ. ಮೀನಿನ ಬೇಸಾಯಕ್ಕೆ ಹದವಾದ ಜಲಾವರಣ ಪ್ರದೇಶವಿದೆ. ಕಾಟ್ಲ, ರೋಹು, ಮೃಗಾಲ, ಬರ್ಬಸ್ ಟಾರ್, ಅಟ್ಟು, ಈಲ್, ಮ್ಯೂರಲ್ ಈ ಜಿಲ್ಲೆಯಲ್ಲಿ ದೊರೆಯುವ ಮೀನುಗಳಾಗಿವೆ. ಕೃಷ್ಣರಾಜಸಾಗರದ ಜಲಾನಯನ ವಿಸ್ತಾರ ಪ್ರದೇಶ, ಶಿವಸಮುದ್ರ ಜಲಾಶಯ ಮತ್ತು ಸುಮಾರು 40 ಕೆರೆಗಳು ಜಿಲ್ಲೆಯಲ್ಲಿ ಮೀನುಗಾರಿಕೆಗೆ ಅವಕಾಶ ಮಾಡಿಕೊಟ್ಟಿವೆ. ಸುಮಾರು 5000ಕ್ಕೂ ಹೆಚ್ಚು ಮೀನುಗಾರಿಕೆ ಅವಲಂಬಿತರೂ ಇದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಮತ್ಸ್ಯೋದ್ಯಮ ಬೆಳೆಯುತ್ತಿದೆ. ಮದ್ದೂರು ತಾಲ್ಲೂಕಿನಲ್ಲಿ ಮೀನು ಸಾಕಣೆಯ 9 ದೊಡ್ಡ ಹಾಗೂ 100 ಚಿಕ್ಕ ಕೆರೆಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಣ್ಯಗಳ ಅಭಿವೃದ್ಧಿ

ಇಡೀ ರಾಜ್ಯದಲ್ಲಿ ಕನಿಷ್ಠ ಅರಣ್ಯಗಳನ್ನು ಹೊಂದಿರುವ ಜಿಲ್ಲೆ ಎಂದರೆ ಮಂಡ್ಯ ಜಿಲ್ಲೆ. ಇಲ್ಲಿನ ಅರಣ್ಯಗಳ ವಿಸ್ತೀರ್ಣ ಕೇವಲ 101 ಚದರ ಕಿ.ಮೀ.ಗಳು. ಇದು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ಶೇಕಡಾ 2ರಷ್ಟಾಗುತ್ತದೆ. ಯಾವುದೇ ಪ್ರದೇಶದ ಭೂವಿಸ್ತೀರ್ಣದ $\frac{1}{3}$ರಷ್ಟಾದರೂ ಅರಣ್ಯಗಳಿರಬೇಕೆಂಬ ನಿಯಮವಿದೆ. ಮಂಡ್ಯ ಈ ದಿಶೆಯಲ್ಲಿ ಕೆಲಮಟ್ಟಿಗಾದರೂ ಅರಣ್ಯಗಳ ಕೃಷಿ, ನೆಡುತೋಪುಗಳ ನಿರ್ಮಾಣ, ನಗರ ಉದ್ಯಾನಗಳು ಇವುಗಳಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಇಲ್ಲಿ ಮಳೆ ಕಡಿಮೆ. ಆದುದರಿಂದ ಪೊದೆ ಗಿಡಗಳ ಹಾಗೂ ಗಿಡ್ಡ ಮರಗಳ ಕಾಡೇ ಹೆಚ್ಚು. ಅಲ್ಲದೆ ಜಿಲ್ಲೆಯಲ್ಲಿ ಉತ್ತರ, ಪಶ್ಚಿಮ ಹಾಗೂ ಪೂರ್ವ ಭಾಗಗಳು ಮೈದಾನ ಪ್ರದೇಶವಷ್ಟೆ. ಮಂಡ್ಯ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶವಿರುವುದಿಲ್ಲ. ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಹೆಚ್ಚು ಬಂಜರುಭೂಮಿ ಇದ್ದು ಅಲ್ಲಲ್ಲಿ ಪೊದೆ ಹಾಗೂ ಕುರುಚಲು ಗಿಡಗಳ ಕಾಡುಗಳಿವೆ. ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕಾವೇರಿ ನದಿ ಹರಿವಿನ ಉದ್ದಕ್ಕೂ ಗಿಡ್ಡ ಮರಗಳ ಕಾಡುಗಳಿವೆ. ಜಿಲ್ಲೆಯ ಈ ಕಾಡುಗಳಲ್ಲಿ ಜಾಲರಿ, ಅಳಲೆ, ಹೊಂಗೆ, ದಿಂಡಿಗ, ದೇವದಾರು, ಚುಜ್ಜಲು, ಬುರುಗಲು, ನಾಯಿಬೇಲ, ಬಂದರೆ, ಬಿಲ್ವತ್ತಿ, ಹುಣಿಸೆ, ನವಿಲಾದಿ, ಚುನ್ನಂಗಿ, ತುಪ್ರ, ಕಕ್ಕೆ, ತಂಗಡಿ ಈ ಮರಗಳು ಬೆಳೆಯುತ್ತವೆ. ಜಾಲರಿ ಅರಗಿನ ಮರ. ಅರಗಿನ ಕೀಟಕ್ಕೆ ಆಶ್ರಯ ನೀಡಿ ಅರಗಿನ ಉತ್ಪಾದನೆಗೆ ಅವಕಾಶ ಮಾಡಿಕೊಡಬಹುದು. ತುಪ್ರ ಮರದ ಎಲೆಗಳು ಬೀಡಿ ಎಲೆಗಳಾಗಿ ಒದಗುತ್ತವೆ. ತಂಗಡಿ ಹಾಗೂ ಕಕ್ಕೆ ಮರಗಳ ಕಾಂಡ ಉಪಯೋಗಕ್ಕೆ ಬರುತ್ತವೆ. ದಿಂಡಿಗ ಒಳ್ಳೆ ಸೌದೆಮರ

Sri Vidyabharathi Book Centre, Shringeri

 CC-O. In Public Domain. Digitized by eGangotri

ವನ್ನು ಕೊಡುತ್ತದೆ. ಚುಜ್ಜಲು ಇಂಧನಕ್ಕೆ ಒದಗುತ್ತದಲ್ಲದೆ ಚುಜ್ಜಲು ಪುಡಿ ತಯಾರಿಕೆಗೆ ಉಪಯೋಗಿಸಬಹುದು. ಚುನ್ನಂಗಿ ಮರ ಗಟ್ಟಿ, ಕೃಷಿ ಉಪಕರಣಗಳ ತಯಾರಿಕೆಯಲ್ಲಿ ನೆರವಾಗುತ್ತದೆ. ಒಳ್ಳೆ ಬೌಬೀನೆಯನ್ನು ಕೊಡುವ ಮರಗಳು ಈ ಕಾಡುಗಳಲ್ಲಿ ದೊರಕದು.

ಕಾವೇರಿ ನದಿ ಅಂಚಿನ ಕಾಡುಗಳಲ್ಲಿ ಮುಳ್ಳು ಹಂದಿ, ನರಿ, ಕಾಡುನಾಯಿ, ಕಾಡುಹಂದಿಗಳು ಕಂಡುಬರುತ್ತವೆ. ಕಾವೇರಿ ನದಿಯಲ್ಲಿ ಮೊಸಳೆಗಳು, ಹಾವುಗಳೂ ಗೋಚರಿಸುತ್ತವೆ. ಕಾಡುಗಳಲ್ಲಿಯೂ ನಾಗರಹಾವು, ಹೆಬ್ಬಾವುಗಳೂ ಇರುತ್ತವೆ. ಈ ಜಿಲ್ಲೆಗೂ ಪಕ್ಷಿಗಳಿಗೂ ನಂಟು. ಇಲ್ಲಿನ ಜಲಾಶಯಗಳು ಮುಖ್ಯ ಆಕರ್ಷಣೆಗಳು. ಮೈನ, ಕವುಜಗ, ಕಾಡು ಪಾರಿವಾಳ, ಗಿಳಿ, ಕೋಗಿಲೆಗಳು ಕಂಡುಬರುತ್ತವೆ. ಪಕ್ಷಿಗಳ ರಾಜ್ಯವಾದ ರಂಗನತಿಟ್ಟು ಪಕ್ಷಿಧಾಮ ಈ ಜಿಲ್ಲೆಯದೇ.

ರಂಗನತಿಟ್ಟು ಪಕ್ಷಿಧಾಮ

ರಾಜ್ಯದ ಪ್ರವಾಸೋದ್ಯಮಕ್ಕೆ ನೆರವಾಗುತ್ತಿರುವ ರಂಗನತಿಟ್ಟು ಪಕ್ಷಿಧಾಮ ಕರ್ನಾಟಕದ ಕೆಲವೇ ಪಕ್ಷಿಧಾಮಗಳಲ್ಲಿ ಒಂದು. ಅಲ್ಲದೆ ಇಡೀ ಭಾರತದಲ್ಲೇ ಇದು ಹೆಸರುವಾಸಿಯಾಗಿದೆ. ಭಾರತದ ಪ್ರಸಿದ್ಧ ಪಕ್ಷಿಧಾಮ ರಾಜಾಸ್ಥಾನದ ಭರತಪುರ ಪಕ್ಷಿಧಾಮ; ಇದು ಬಿಟ್ಟರೆ ಎರಡನೆಯ ದೊಡ್ಡ ಪಕ್ಷಿಧಾಮ ಮದರಾಸಿನ ವೇದಾಂತಂಗಾಳ್ ಪಕ್ಷಿಧಾಮ. ಮೂರನೆಯದು ಮಂಡ್ಯ ಜಿಲ್ಲೆಯ ರಂಗನತಿಟ್ಟು ಪಕ್ಷಿಧಾಮ. ಇದೇ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಕ್ಕರೆ ಬೆಳ್ಳೂರು ಅಭಿವೃದ್ಧಿಯಾದರೆ ಒಂದು ಸುಂದರ ಪಕ್ಷಿಧಾಮವಾಗುತ್ತದೆ. ರಂಗನ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಟ್ಟು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಪಾಲಹಳ್ಳಿಗೆ ಸಮೀಪದಲ್ಲಿ ಶ್ರೀರಂಗಪಟ್ಟಣದಿಂದ 3 ಕಿ.ಮೀ. ದೂರದಲ್ಲಿದ್ದು ಕಾವೇರಿ ನದಿಯ ಮೂರು ಸಣ್ಣ ದ್ವೀಪಗಳನ್ನೊಳಗೊಂಡಿದೆ. ಇಲ್ಲಿಗೆ ಪಕ್ಷಿಗಳು ಬರುವುದು, ಸಂತತಿ ಪೋಷಣೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇಲ್ಲಿನ ಪರಿಸರ, ಕಾವೇರಿ ನದಿಯ ಬಯಲಿನ ಹಸಿರು ಪೈರು ಪಚ್ಚೆಗಳು, ಇತರ ಜಲಚರ ಪ್ರಾಣಿಗಳು, ಹುಳು ಹುಪ್ಪಟೆಗಳು ಪಕ್ಷಿಗಳಿಗೆ ಆಹಾರವಾಗಿರುವುದು. ಇಲ್ಲಿ ಜೂನ್ ತಿಂಗಳಿಂದ ನವಂಬರ್‌ವರೆಗೆ ಪಕ್ಷಿಗಳು ಧಾವಿಸಿಬರುತ್ತವೆ. ಬಾವಲಿಗಳು, ಚಮಚಮುಖಿ, ಬೆಳ್ಳಕ್ಕಿ, ಹಾವಕ್ಕಿ, ಬಿಳಿ ಬೂಸಾ, ನೀರು ಕಾಗೆ, ಕೊಕ್ಕರೆ ಮುಂತಾದ ಹಕ್ಕಿಗಳು ಆಗ ಇಲ್ಲಿ ಸಮೃದ್ಧಿಯಾಗಿರುತ್ತವೆ. ಪ್ರೇಕ್ಷಕರು ನೋಡಲನುಕೂಲವಾಗುವಂತೆ ಒಂದು ಗೋಪುರವನ್ನು ನಿರ್ಮಿಸಲಾಗಿದೆ. ನದಿಗಳಲ್ಲಿ ನೌಕಾಯಾನ ಮಾಡಿಯೂ ಹಕ್ಕಿಗಳ ಸೊಬಗನ್ನು ನೋಡಿ ಸವಿಯಬಹುದು. ಇದೊಂದು ಪಕ್ಷಿ ಕಾಶಿ.

ಖನಿಜ ಸಂಪನ್ಮೂಲಗಳು—ಭೂ ಶಿಲೆಗಳು

ಕರ್ನಾಟಕದಲ್ಲಿ ಆರ್ಷೇಯ ಕಲ್ಪದ ಶಿಲಾವರ್ಗಗಳು ಹರಡಿದ್ದು ಇವುಗಳನ್ನು ಧಾರವಾಡ ಪದರಶಿಲೆಗಳು (ಶಿಸ್ಟ್) ಮತ್ತು ಗ್ರಾನೈಟ್–ನೈಸ್ ಶಿಲಾಸ್ತೋಮಗಳೆಂದು ಎರಡು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ಧಾರವಾಡ ಶಿಲಾಪದರಗಳು ಮೊದಲು ರೂಪುಗೊಂಡವು ಎಂದು ತಿಳಿಯಲಾಗಿದೆ. ಇವು ಅತಿ ಪುರಾತನ ಶಿಲಾಸಮುದಾಯಗಳು. ಮಂಡ್ಯ ಜಿಲ್ಲೆಯ ಬಹುಭಾಗ ನೈಸ್ ಶಿಲೆಯ ಪ್ರದೇಶ. ಪದರಯುತವಾಗಿರುವ ಈ ಶಿಲಾಸ್ತೋಮ ಬೂದು ಬಣ್ಣಕ್ಕಿದ್ದು ಚಿನಕುರುಳಿ ಎಂಬಲ್ಲಿ ಕಾಣುತ್ತದೆ. ಕೃಷ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜಪೇಟೆ, ಮೇಲುಕೋಟೆ, ಸಿಂದಘಟ್ಟ ಈ ಕೆಲವೆಡೆಗಳಲ್ಲಿ ಪದರ ಶಿಲಾಭಾಗಗಳಿದ್ದು ಭಿನ್ನರೀತಿಯ ನೈಸ್ ಶಿಲೆಗಳಿವೆ. ಧಾರವಾಡ ಪದರ ಶಿಲೆಗಳು ಕೆಲವೆಡೆ ಇದ್ದರೂ ಪಟ್ಟಿಗಳು ಹೆಚ್ಚು ಅಗಲವಿರುವುದಿಲ್ಲ. ಬೆಳ್ಳಿ ಬೆಟ್ಟ ಪಟ್ಟಿ, ಹದನೂರು ಪಟ್ಟಿ, ಕೆ. ಆರ್. ಪೇಟೆ ಮತ್ತು ಚಿನಕುರುಳಿಗಳ ನಡುವೆ ಇರುವ ಪಟ್ಟಿಗಳು ಮುಖ್ಯವಾಗಿವೆ. ಇವು ಉದ್ದುದ್ದಕ್ಕಿರುತ್ತವೆ. ಧಾರವಾಡ ಶಿಲಾಸ್ತೋಮವು ಮಂಡ್ಯ ಜಿಲ್ಲೆಯಲ್ಲಿ ಕೆಲವು ಚಿಕ್ಕ ಕವಲುಗಳಾಗಿದ್ದು ಶ್ರೀರಂಗಪಟ್ಟಣದ ದಕ್ಷಿಣದಲ್ಲಿ ಕೊನೆಗೊಳ್ಳುತ್ತದೆ. ಎಡೆಯೂರಿನಿಂದ ಕರಿಘಟ್ಟದವರೆಗೆ ಸಾಗಿರುವ ಒಂದು ಪಟ್ಟಿಯಲ್ಲಿ ಕಪ್ಪು ಹಾರ್ನ್‌ಬ್ಲೆಂಡ್ ಇದೆ. ಹೀಗೆಂದರೆ ಕಬ್ಬಿಣ ಮತ್ತು ಮೆಗ್ನೀಸಿಯಂ ಸಿಲಿಕೇಟ್ ಸಂಯೋಜಿತ ಖನಿಜ. ಕಬ್ಬಿಣದ ಅದುರಿನಿಂದ ಕೂಡಿದ ಒಂದು ಪಟ್ಟಿ ಮದ್ದೂರು–ಚನ್ನಪಟ್ಟಣಗಳ ನಡುವೆ ಹಾದುಹೋಗಿದ್ದು ಇವುಗಳಲ್ಲಿ ಅಲ್ಲಲ್ಲಿ ಬೆಣಚು ಪಟ್ಟಿಗಳೂ ಇವೆ. ತಳಗವಾಡಿ, ಸಿದ್ಧಲಿಂಗಪುರ, ಕನಗಟ್ಟಿ, ನಾರಣಕೆರೆ, ತುರಗನೂರು ಈ ಕೆಲವು ಕಡೆಗಳಲ್ಲಿ ಫೆಲ್ಸೈಟ್ ಮತ್ತು ಪಾರ್ಫಿರಿಡ್ಸ್‌ಕ್ ಶಿಲೆಗಳು ಕಂಡುಬಂದಿವೆ.

ಜಿಲ್ಲೆಯ ಮುಖ್ಯ ಖನಿಜಗಳು ಕಬ್ಬಿಣದ ಅದುರುಗಳು, ಬೆರಿಲ್, ಕೋರಂಡಂ (ಕುರಂದ), ಚೌಳು ಮಣ್ಣು, ಅಭ್ರಕ, ಅಲಂಕಾರ ಶಿಲೆಗಳು, ಕ್ರೋಮೈಟ್ ಇವುಗಳು. ಇತ್ತೀಚಿನ ಅಂದರೆ 1983–84ರಲ್ಲಿನ ಪರಿಶೋಧನೆಗಳಿಂದ ಕೆ. ಆರ್. ಪೇಟೆ ಮತ್ತು ನಾಗಮಂಗಲ ಪ್ರದೇಶಗಳಲ್ಲಿ ಕೊಲಂಬೈಟ್, ಟ್ಯಾಂಟಲೈಟ್ ಮತ್ತು ಬೆರಿಲ್ ಒಳಗೊಂಡ ಪೆಗ್ಮಾಟೈಟ್ ಖನಿಜಗಳಿರುವ ಸ್ಥಳಗಳು ಪತ್ತೆಯಾಗಿವೆ.

ಬೆರಿಲಿಯಂ ಮತ್ತು ಅಲ್ಯುಮಿನಿಯಂ ಸಿಲಿಕೇಟಾದ ಬೆರಿಲ್ ಖನಿಜವು ಹಲವಾರು ವರ್ಣಗಳಲ್ಲಿ ದೊರೆಯುತ್ತದೆ. ಸಾಮಾನ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಇದು ಇತರ ಖನಿಜಗಳಿಂದೊಡಗೂಡಿ ಪೆಗ್ಮಟೈಟ್ ಸಿರ ಗಳಲ್ಲಿ ಕಂಡುಬರುತ್ತದೆ. ಇತ್ತೀಚಿನ ಸಂಶೋಧನೆಗಳಿಂದಲೂ ಮಂಡ್ಯ ಜಿಲ್ಲೆಯಲ್ಲಿ ಬೆರಿಲ್ ಖನಿಜ ಸಿಗುತ್ತದೆಂದು ತಿಳಿಯ ಲಾಗಿದೆ. ಮುಖ್ಯವಾಗಿ ಮೇಲುಕೋಟೆಯಲ್ಲಿಯೂ ಹಾಗೂ ಅದರ ದಕ್ಷಿಣದಲ್ಲಿ ಇರುವ ಪೆಗ್ಮಟೈಟ್‌ಗಳಲ್ಲಿ ಹಳದಿ ಮಿಶ್ರಿತ ಹಸುರುಛಾಯೆಯ ಬೆರಿಲ್ ಹರಳುಗಳು ದೊರೆತಿವೆ. ಉತ್ತಮ ವಾದ ನೀಲ ಹಸುರಿನ ಬೆರಿಲ್ ಶಿಲೆ ಕೃಷ್ಣರಾಜಸಾಗರಕ್ಕೆ ಉತ್ತರ ದಲ್ಲಿರುವ ಕಟ್ಟೇರಿ ಮತ್ತು ಚಿಕ್ಕಯಾರ್ಹಳ್ಳಿಗಳ ಬಳಿಯ ನಿಕ್ಷೇಪ ಗಳಲ್ಲಿವೆ. ಪಾಂಡವಪುರ ತಾಲ್ಲೂಕು ಬೇಬಿ ಗ್ರಾಮ ಮತ್ತು ಲಿಂಗನ ಕೊಪ್ಪಗಳ ಬಳಿಯಲ್ಲೂ ಬೆರಿಲ್ ಹರಳುಗಳು ದೊರೆತಿವೆ. ಕೆ. ಆರ್. ಪೇಟೆ ತಾಲ್ಲೂಕಿನ ಕುರುಬರ ಮಂಜೇನಹಳ್ಳಿ ಮತ್ತು ರಾಗಿಮುದ್ದನಹಳ್ಳಿ ಪ್ರದೇಶದಲ್ಲಿನ ಅಭ್ರಕದ ಗಣಿಯ ರಾಶಿಗಳ ಲ್ಲಿಯೂ ಹಿಂದೆ ಬೆರಿಲ್ ಹರಳುಗಳು ದೊರೆತವು. ಇನ್ನೂ ಈ ದಿಶೆಯಲ್ಲಿ ಸಂಶೋಧನೆಗಳು ಗಣಿ ಉದ್ಯಮಗಳನ್ನು ಸ್ಥಾಪಿಸುವ ಕೆಲಸವೂ ನಡೆಯಬೇಕಾಗಿದೆ. ಆಗ ಪೆಗ್ಮಟೈಟ್‌ಗಳು ಎಷ್ಟು ಪ್ರಮಾಣದಲ್ಲಿ ಸಿಗಬಹುದೆಂದು ಪತ್ತೆಹಚ್ಚಬಹುದು. ಆರ್ಥಿಕ ವಾಗಿ ಲಾಭ ಬರುವುದಾದರೆ ಈ ಉದ್ಯಮವನ್ನು ತೆಗೆದುಕೊಳ್ಳ ಬಹುದಾಗಿದೆ. ಬೆರಿಲ್ ಖನಿಜದಿಂದ ಬೆರಿಲಿಯಂ ಲೋಹವನ್ನು ಬೇರ್ಪಡಿಸಿ ತೆಗೆಯಬಹುದಾಗಿರುತ್ತದೆ.

ಈ ಹಿಂದೆ ಮಂಡ್ಯದ ನೈಋತ್ಯಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿ ಕಲ್ಲಾರಿನ ಶಿಲೆ ಇರುವುದೆಂದು ತಿಳಿಯಲಾಗಿತ್ತು. ಕೃಷ್ಣರಾಜಸಾಗರದ ಸಮೀಪದ ಉಂದವಾಡಿ ನಿಕ್ಷೇಪ, ಪಾಂಡವ ಪುರದ ಹತ್ತಿರದ ವಡೆಸಮುದ್ರ ನಿಕ್ಷೇಪವೂ ಅಭ್ರಕವನ್ನೊಳ ಗೊಂಡ ಪೆಗ್ಮಟೈಟ್ ಸಿರವನ್ನು ಪಡೆದಿವೆ. ಇಲ್ಲಿ ಸಿಗುವ ಅಭ್ರಕದ ಪ್ರಮಾಣ ಕಡಮೆ ಎನ್ನಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಡ್ಯ ಜಿಲ್ಲೆಯಲ್ಲಿ ಬೆಲೆಬಾಳುವ, ಆರ್ಥಿಕವಾಗಿ ಲಾಭ ತರುವ ಖನಿಜಗಳು ಅಷ್ಟಾಗಿ ಇಲ್ಲ. ಮದ್ದೂರು, ಮಳವಳ್ಳಿ ಹಾಗೂ ಹಲಗೂರು ಬಳಿ ಕಬ್ಬಿಣದ ಅದುರು ಶೀಳನೆರೆ ಎಲ್ಲೆಯಲ್ಲಿ ಸಾಮಾನ್ಯ ದರ್ಜೆಯ ಕ್ರೋಮೈಟ್ ಸ್ವಲ್ಪಮಟ್ಟಿಗೆ ಸಿಗುವುದು. ನಾಗಮಂಗಲದ ಪೂರ್ವಕ್ಕೆ ಅನತಿ ದೂರದಲ್ಲಿ ಕಯನೈಟ್ ಮತ್ತು ಸಿಲ್ಲಿಮನೈಟ್ ಇದ್ದರೂ ಆರ್ಥಿಕವಾಗಿ ಇವು ಮುಖ್ಯ ಎನಿಸಿಲ್ಲ. ಮಂಡ್ಯದ ಪೂರ್ವಕ್ಕೆ 3 ಕಿ.ಮೀ. ದೂರದಲ್ಲಿನ ಹಬ್ಬಳ್ಳ ತೊರೆ ದಡಗಳಲ್ಲಿ ಹಾಗೂ ಮಂಡ್ಯದ ದಕ್ಷಿಣಕ್ಕೆ 9 ಕಿ.ಮೀ. ದೂರದ ಸಿಂದಲಗೇರಿಯಲ್ಲಿ ಸುಣ್ಣ ಕಂಕರು ದೊರೆಯುತ್ತದೆ. ಮಂಡ್ಯ ಸುತ್ತಮುತ್ತಲ ಪ್ರದೇಶಗಳಾದ ತೊರಸನ ಹಳ್ಳಿ, ರಾಮನಹಳ್ಳಿ, ಸಾತನೂರು ಮೊದಲಾದ ಕಡೆಗಳಲ್ಲಿ ಕೋರಂಡಂ ಹರಳುಗಳು ಕಾಣಿಸಿಕೊಂಡಿವೆ. ಬೆಳ್ಳಂಡಗೆರೆ, ನೆಲಮಾಕನಹಳ್ಳಿ ಗಳಲ್ಲೂ ಕೋರಂಡಂ ನಿಕ್ಷೇಪ ಕೆಲಮಟ್ಟಿಗಿದೆ. ಘರ್ಷಕ ವಸ್ತುಗಳ ತಯಾರಿಕೆಯಲ್ಲಿ ಕೋರಂಡಂನ ಬಳಕೆ ಇದೆ.

ಮಂಡ್ಯದ ಸುತ್ತುಮುತ್ತಲೂ ನೆಲಮಟ್ಟದಲ್ಲಿ ತೆಳುವಾದ ಪದರಗಳಲ್ಲಿ ಚೌಳುಮಣ್ಣು ಹರಡಿರುತ್ತದೆ. ಸಾಮಾನ್ಯವಾಗಿ ಇದು ಗ್ರಾನೈಟ್ ಮತ್ತು ನೈಸ್ ಶಿಲೆಗಳ ಸೋಡಾ ಫೆಲ್‌ಸ್ಪಾರಿನ ಮೇಲೆ ಹೈಡ್ರೊಕ್ಲೋರಿಕ್ ಮತ್ತು ಕಾರ್ಬಾನಿಕ್ ಆಮ್ಲಗಳಿಂದ ಕೂಡಿದ ಅಂತರ್ಜಲದ ರಾಸಾಯನಿಕ ಕ್ರಿಯೆಯಿಂದ ಉಂಟಾದುದು. ಚೌಳು ಮಣ್ಣಿನಲ್ಲಿ ಶೇಕಡಾ 10 ಭಾಗ ಚೌಳೂ (ಸೋಡಿಯಂ ಕಾರ್ಬೊನೇಟ್) ಮತ್ತು ಉಪ್ಪು ಮತ್ತು ಸೂಕ್ಷ್ಮಕಣದ ಮರಳೂ ಇರುತ್ತವೆ. ಈ ಚೌಳು ಅಗಸರು ಬಟ್ಟೆಗಳನ್ನು ಒಗೆದು ಶುಭ್ರಗೊಳಿಸುವುದಕ್ಕೆ ನೆರವಾಗುತ್ತದೆ. ಚೌಳುಮಣ್ಣನ್ನು ಸಾಮಾನ್ಯವಾಗಿ ಕೆರೆದು ಸಂಗ್ರಹಿಸುತ್ತಾರೆ. ಕೆಲವೊಮ್ಮೆ ಚೌಳುಮಣ್ಣಿನಲ್ಲಿ ಮಣ್ಣುಪ್ಪ ಬೆರೆತಿರುತ್ತದೆ. ಮಣ್ಣುಪ್ಪ ಮಂಡ್ಯ ಜಿಲ್ಲೆಯ ರಾಮನಹಳ್ಳಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಟ್ಟಿಲು, ಕಬ್ಬನಹಳ್ಳಿ, ಮಾಲೀರಕೊಪ್ಪಲು, ಹೊಳಲು ಮೊದಲಾದ ಗ್ರಾಮಗಳಲ್ಲಿ ದೊರೆಯುತ್ತದೆ. ಮಣ್ಣುಪ್ಪಿನಿಂದ ಅಡಿಗೆ ಉಪ್ಪನ್ನು ತಯಾರಿಸುತ್ತಾರೆ. ಉಪ್ಪಾರರು ಎಂದು ಕರೆಯಲಾಗುವ ಒಂದು ಪಂಗಡ ಹಿಂದೆ ಉಪ್ಪು ತೆಗೆದು ತಯಾರಿಸುವ ಉದ್ದಿಮೆಯಲ್ಲಿ ತೊಡಗಿದ್ದರು. ಮಳವಳ್ಳಿ ತಾಲ್ಲೂಕಿನ ಕನ್ನಳ್ಳಿ ಹತ್ತಿರದ ಸೂಳೆಕೆರೆ ಪ್ರದೇಶದಲ್ಲಿ ಚಾಳುಪ್ಪು ದೊರೆಯುತ್ತದೆ. ಇದೇ ತಾಲ್ಲೂಕಿನ ಗುರುದೇವರ ಹಳ್ಳಿ, ಅರಸಿನಕೆರೆ ಬಳಿ ಕೋರಂಡಂ ನಿಕ್ಷೇಪವಿದೆ. ಕೆ. ಆರ್ ಪೇಟೆ ಪಶ್ಚಿಮಕ್ಕೆ ಬೆಳ್ಳಿ ಬೆಟ್ಟದ ಬಳಿ ಚಿನ್ನ ದೊರೆಯುತ್ತದೆಂದು ಭಾವಿಸಲಾಗಿದೆ. ಕೆ. ಆರ್. ಪೇಟೆಗೆ ಸುಮಾರು 5 ಕಿ.ಮೀ. ದೂರದಲ್ಲಿ ಬಿಣಚುಕಲ್ಲು ಮತ್ತು ಬೂದು ಬಣ್ಣದ ಶಿಲೆಗಳಿವೆ. ನಾಗಮಂಗಲ ತಾಲ್ಲೂಕಿನ ಪಶ್ಚಿಮಭಾಗದ ಶಿಲೆಗಳಲ್ಲಿ ಸ್ವಲ್ಪಮಟ್ಟಿನ ಚಿನ್ನದ ನಿಕ್ಷೇಪವಿದೆ ಎನ್ನಲಾಗಿದೆ. ಆದರೆ ಇದು ಆರ್ಥಿಕವಾಗಿ ಮುಖ್ಯ ಎನಿಸಿಲ್ಲ. ಪಾಂಡವಪುರ ಮತ್ತು ಮೇಲುಕೋಟೆ ಬಳಿ ಗ್ರಾನೈಟ್ ಶಿಲೆಗಳ ಬೆಟ್ಟಗಳಿವೆ.

ಫೆಲ್ಸ್ಪಟ್ ಮತ್ತು ಪಾರ್ಫಿರಿ ಡೈಕುಗಳು ವಿವಿಧ ಬಣ್ಣಗಳಿಂದ ಕೂಡಿದ್ದು ಶ್ರೀರಂಗಪಟ್ಟಣ, ಮಂಡ್ಯ ತಾಲ್ಲೂಕುಗಳಲ್ಲಿ ಹರಡಿವೆ. ಈ ಶಿಲೆಗಳು ಗ್ರಾನೈಟ್ ಮತ್ತು ನೈಸ್ ಶಿಲಾಪ್ರದೇಶಗಳಲ್ಲಿ ಡೈಕ್‌ಗಳಾಗಿ ತೋರಿಬರುತ್ತವೆ. ಡೈಕ್‌ಗಳು ಅತಿ ಪ್ರಾಚೀನವಾದ ಶಿಲಾವರ್ಗಗಳು. ಈ ಶಿಲೆಗಳನ್ನು ಅಲಂಕಾರಕ ಅಂಚುಗಳ ತಯಾರಿಕೆಗೆ ಉಪಯೋಗಿಸಬಹುದಾಗಿದೆ. ಚಪ್ಪಡಿಗಳನ್ನಾಗಿ ಎತ್ತಲು ಇವು ಒದಗುವುದಿಲ್ಲ.

ನೀರಾವರಿ ಮತ್ತು ವಿದ್ಯುಚ್ಛಕ್ತಿ

ಕೆರೆಗಳ ನಿರ್ಮಾಣ, ನದಿಗಳಿಗೆ ಅಣೆಕಟ್ಟು ಕಟ್ಟಿ ಜಲಾಶಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನು ನಿರ್ಮಿಸುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕರ್ನಾಟಕವನ್ನು ಆಳಿದ ರಾಜಮಹಾರಾಜರುಗಳು ಪಟ್ಟಣಗಳಿಗೆ ನೀರೊದಗಿಸಲು ಕೃಷಿ ಭೂಮಿಗಳಿಗೆ ನೀರು ಸರಬರಾಜು ಮಾಡುವ ಉದ್ದೇಶದಿಂದ ಕೆರೆಗಳನ್ನು ಕಟ್ಟಿಸುವ ಪುಣ್ಯ ಕಾರ್ಯಗಳನ್ನು ಮಾಡುತ್ತಿದ್ದರು. ಹೀಗೆ ಕಟ್ಟಿಸಿದ ಕೆರೆಗಳು ಇಂದಿಗೂ ಇವೆ. ಹಾಗೆಯೇ ನೀರಾವರಿ ಕಾರ್ಯ ಕೂಡ. ಮೈಸೂರು ಮಹಾರಾಜರ ಕಾಲದಲ್ಲಿ ಕಾವೇರಿ ನದಿಗೆ ಸುಮಾರು ಆರು ಅಣೆಕಟ್ಟುಗಳನ್ನು ಕಟ್ಟಲಾಯಿತು. ಇವು ಈಗಲೂ ಉಪಯುಕ್ತವಾಗಿವೆ. ರಾಜ್ಯದಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶಗಳು ಕೆಲವಿದ್ದರೆ ಮತ್ತೆ ಕೆಲವು ಪ್ರದೇಶಗಳಲ್ಲಿ ತೀರ ಕಡಿಮೆ. ಮಂಡ್ಯ ಜಿಲ್ಲೆ ಇದಕ್ಕೆ ಒಂದು ಉದಾಹರಣೆ. ಇಲ್ಲಿ ನೀರಾವರಿ ತುಂಬಾ ಅಗತ್ಯ. ಹರಿಯುವ ನದಿ ನೀರಿಗೆ ಅಡ್ಡಕಟ್ಟೆ ಕಟ್ಟಿ ಅಲ್ಲಿ ಸಂಗ್ರಹಿಸಿದ ನೀರನ್ನು ಕಾಲುವೆಗಳ ಮೂಲಕ ಹಾಯಿಸಿ ಬೆಳೆಗಳಿಗೆ ಒದಗಿಸಬಹುದು. ಬಾವಿಗಳನ್ನು ತೋಡಿ ನೀರಾವರಿ ಸೌಕರ್ಯಗಳನ್ನು ಕಲ್ಪಿಸಬಹುದು.

ಮಂಡ್ಯ ಜಿಲ್ಲೆಗೆ ಸೇರಿದ ಕನ್ನಂಬಾಡಿ ಎಂಬಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟೆ ಕಟ್ಟಿ ನಿರ್ಮಿಸಲಾಗಿರುವ ಜಲಾಶಯ ಕೃಷ್ಣರಾಜಸಾಗರ. ಈ ಜಲಾಶಯ ಮೈಸೂರು ನಗರಕ್ಕೆ ವಾಯವ್ಯದಲ್ಲಿ 16 ಕಿ.ಮಿ. ದೂರದಲ್ಲಿದೆ. ಇದನ್ನು ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿಗಳ ಸಂಗಮ ಬದುವಿನಿಂದ ಕೆಳಗೆ ಕಾವೇರಿಗೆ ಅಡ್ಡಲಾಗಿ ಶ್ರೀರಂಗಪಟ್ಟಣಕ್ಕೆ 14 ಕಿ.ಮಿ. ಮೇಲುಗಡೆ ಕಟ್ಟಿದ್ದಾರೆ. ಇಲ್ಲಿ ಜಲಾಶಯವನ್ನು ಕಟ್ಟಲು ಹಿಂದೆ ಟಿಪ್ಪುಸುಲ್ತಾನನು ಪ್ರಯತ್ನಿಸಿದ್ದು ಉಂಟು. ಈ ಕಟ್ಟೆಯನ್ನು ಕಟ್ಟುವುದಕ್ಕೆ ಮೊದಲೇ ಕಾವೇರಿ ನದಿಗೆ ಕೆಲವು ಹಳೆಯ ಅಣೆಕಟ್ಟುಗಳಿದ್ದವು. ಇವುಗಳಲ್ಲಿ ಹೇಮಾವತಿ ನದಿಗೆ ಮಂದಗೆರೆ (ಕೆ. ಆರ್. ಪೇಟೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಲ್ಲೂಕು) ಬಳಿ ಕಟ್ಟಿರುವ ಮಂದಗೆರೆ ಅಣೆಕಟ್ಟು, ಶಿಂಷಾನದಿಗೆ ಕಟ್ಟಿರುವ ತಗ್ಗಳ್ಳಿ (ಮದ್ದೂರು ತಾಲ್ಲೂಕು) ಅಣೆಕಟ್ಟು ಪುರಾತನ ಅಣೆಕಟ್ಟುಗಳು. ಕೃಷ್ಣರಾಜಸಾಗರ ಅಣೆಕಟ್ಟಿನ ಜಲಾಶಯದ ಜಲಾನಯನ ವಿಸ್ತೀರ್ಣ 10,619 ಚದರ ಕಿ.ಮೀ.ಗಳು. ಅಣೆಕಟ್ಟಿನ ಉದ್ದ 2621 ಮೀಟರ್, ಎತ್ತರ 41 ಮೀಟರುಗಳು. ಈ ಅಣೆಕಟ್ಟಿನ ಯೋಜನೆಯನ್ನು ಪ್ರಸಿದ್ಧ ಎಂಜಿನಿಯರ್ ಆಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ತಯಾರಿಸಿದರು. ಗ್ರಾನೈಟ್ ಕಲ್ಲು ಮತ್ತು ಸುರ್ಕಿ ಗಾರೆಯಿಂದ ಕಟ್ಟಿಯನ್ನು ಕಟ್ಟಲಾಗಿದೆ. ಅಣೆಕಟ್ಟಿನಲ್ಲಿ ಹಲವಾರು ತೂಬುಗಳಿದ್ದು ಉತ್ತರದಡದ ತೂಬಿನಿಂದ ಮುಖ್ಯ ಕಾಲುವೆಯಾದ ವಿಶ್ವೇಶ್ವರಯ್ಯ ನಾಲೆಗೆ ನೀರನ್ನು ಬಿಡಲಾಗುತ್ತದೆ. ವಿಶ್ವೇಶ್ವರಯ್ಯ ನಾಲೆ ಮುಖ್ಯ ನೀರಾವರಿ ನಾಲೆ. ಮಂಡ್ಯ ಹಾಗೂ ಪಾಂಡವಪುರದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಇಲ್ಲಿನ ನೀರೊದಗಿದ್ದು ಮುಖ್ಯ ಕಾರಣವಾಗಿದೆ. ವಿಶ್ವೇಶ್ವರಯ್ಯ ನಾಲೆ ಹುಲಿಕೆರೆ ಸುರಂಗ ದಾಟಿದ ಮೇಲೆ ಎರಡು ಕವಲಾಗಿ ಮದ್ದೂರು ಮತ್ತು ಕಾವೇರಿ ಶಾಖೆಗಳಾಗಿ ಹರಿಯುತ್ತವೆ. ಕೃಷ್ಣರಾಜಸಾಗರ ಜಲಾಶಯದಿಂದ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಿಗೆ ನೀರಾವರಿ ಸೌಕರ್ಯ ಒದಗಿದೆ. ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್. ಪೇಟೆ ತಾಲ್ಲೂಕು ಬಿಟ್ಟು ಉಳಿದೆಲ್ಲ ತಾಲ್ಲೂಕುಗಳೂ ಸೇರಿದಂತೆ ಅಚ್ಚುಕಟ್ಟು ವಿಸ್ತಾರ ಒಟ್ಟು 0.43 ಲಕ್ಷ ಹೆಕ್ಟೇರುಗಳು. ಜಿಲ್ಲೆಯ ಹಲವಾರು ನಾಲೆಗಳಲ್ಲಿ ಸೀತಾಪುರದ ಬಳಿ ಮಾಡದಕಟ್ಟೆಯಿಂದ ಹೊರಡುವ ದೇವರಾಯ ನಾಲೆ, ಇದರ ಸಮೀಪದಲ್ಲಿನ ದೇವರಾಯನ ಕಟ್ಟೆಯಿಂದ ಹೊರಡುವ ನಾಲೆ, ಮಂಡ್ಯ ತಾಲ್ಲೂಕಿನ ಹುಲಿಕೆರೆ ಬಳಿಯ ಸುರಂಗ ನಾಲೆ, ಬೆಳಗೊಳದ ಸಮೀಪದಲ್ಲಿರುವ ಬಲಮುರಿಯ ಅಣೆಕಟ್ಟಿನಿಂದ ಹೊರಡುವ ವಿರಜಾನದಿ ನಾಲೆ, ಪಶ್ಚಿಮವಾಹಿನಿ ಹತ್ತಿರದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಗಾರದೊಡ್ಡಿ ನಾಲೆ ಮುಖ್ಯವಾದವು. ಇವೇ ಅಲ್ಲದೆ ಜಿಲ್ಲೆಯ ಇತರ ನದಿ, ತೊರೆಗಳಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ತಗ್ಗಳ್ಳಿಯ ಬಳಿ ಬಂಡಿಹೊಳೆ ಹತ್ತಿರದ ಹೇಮಗಿರಿ ಅಣೆಕಟ್ಟು, ನಾಗಮಂಗಲ ತಾಲ್ಲೂಕಿನ ಉಯ್ಯನ ಹಳ್ಳಿ ಬಳಿ ಲೋಕಪಾವನಿಗೆ ಕಟ್ಟಿರುವ ಅಣೆಕಟ್ಟು, ಮೇಲುಕೋಟೆ ಹೋಬಳಿಯ ಬೋಳೇನ ಹಳ್ಳಿ ಬಳಿ ಲೋಕಪಾವನಿಗೆ ಕಟ್ಟಲಾಗಿರುವ ಮತ್ತೊಂದು ಅಣೆಕಟ್ಟು, ನಾಗಮಂಗಲ ತಾಲ್ಲೂಕಿನ ದುಮ್ಮಸಂದ್ರ ಎಂಬಲ್ಲಿ ವೀರ ವೈಷ್ಣವಿ ನದಿಗೆ ಕಟ್ಟಿರುವ ಅಣೆಕಟ್ಟು, ಭೀಮಾ ತೊರೆಗೆ ಮಳವಳ್ಳಿ ತಾಲ್ಲೂಕಿನಲ್ಲಿ ದಳವಾಯಿ ಕೋಡಿಹಳ್ಳಿ ಬಳಿ ಕಟ್ಟಿರುವ ಅಣೆಕಟ್ಟು ಇವು ಈಚಿನ ನಿರ್ಮಾಣಗಳಾಗಿದ್ದು ಇಲ್ಲಿ ಸಂಗ್ರಹವಾದ ನೀರು ಸುತ್ತಮುತ್ತಲ ಗ್ರಾಮಗಳಿಗೆ ಒದಗುತ್ತದೆ. ಶಿಂಷಾನದಿಯ ಅಡ್ಡಲಾಗಿದ್ದ ಮದ್ದೂರು ಅಣೆಕಟ್ಟು ಮತ್ತು ನಾಲೆ ವಿಶ್ವೇಶ್ವರಯ್ಯ ನಾಲೆಯ ಕಾವೇರಿ ಶಾಖೆಯಲ್ಲಿ ವಿಲೀನಗೊಂಡಿದೆ.

ಹಾಸನ ಜಿಲ್ಲೆಯ ಗೊರೂರು ಬಳಿ ಕಟ್ಟಲಾಗಿರುವ ಹೇಮಾವತಿ ಅಣೆಕಟ್ಟಿನ ಜಲಾಶಯದಿಂದ ಹಾಸನ, ಮಂಡ್ಯ ಹಾಗೂ ತುಮಕೂರು ಜಿಲ್ಲೆಗಳಿಗೆ ನೀರಾವರಿ ಅನುಕೂಲವಿದೆ. ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ, ಪಾಂಡವಪುರ, ನಾಗಮಂಗಲ, ಮದ್ದೂರು ಮತ್ತು ಮಂಡ್ಯ ತಾಲ್ಲೂಕುಗಳಿಗೆ ಈ ನೀರು ಒದಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಒಟ್ಟು ನೀರಾವರಿ ಕ್ಷೇತ್ರ ಸುಮಾರು 86,569 ಹೆಕ್ಟೇರುಗಳು.

ಬೃಂದಾವನ

ಕೃಷ್ಣರಾಜಸಾಗರದ ಅಣೆಕಟ್ಟಿನ ಕೆಳಗೆ ಇರುವ ಒಂದು ಸುಂದರವಾದ ಉದ್ಯಾನ. ಮೈಸೂರಿನ ದಿವಾನರಾಗಿದ್ದ ಮಿರ್ಜಾ

Sri Vidyabharathi Book Centre, Sringeri

CC-O. In Public Domain. Digitized by eGangotri



ಶೃಂಗೇರಿ ಶ್ರೀಮಠ

Sri Vidyabharathi Book Centre, Sringeri

 CC-O. In Public Domain. Digitized by eGangotri

ಇಸ್ಮಾಯಿಲ್ ಅವರು ಕಟ್ಟಿಯ ಹಿಂದುಗಡೆ ಈ ಬೃಂದಾವನವನ್ನು ಎರಡೂ ದಡಗಳಲ್ಲಿಯೂ ನಿರ್ಮಿಸಿದರು. ಇಲ್ಲಿ ಬಗೆಬಗೆಯ ಚಿಲುಮೆಗಳು, ಸಣ್ಣ ಸಣ್ಣ ಕೊಳಗಳು, ಬಗೆಬಗೆಯ ಹೂಗಿಡ ಗಳು ಇದ್ದು ಇವುಗಳೆಲ್ಲದರ ಮೇಲೆ ವಿವಿಧ ಬಣ್ಣಗಳ ಬೆಳಕು ಬೀಳುವಂತೆ ವ್ಯವಸ್ಥೆ ಮಾಡಲಾಗಿದೆ. ಕುಸುಮೋಪವನ, ಕಾರಂಜಿ, ಬಳ್ಳಿ ಚಪ್ಪರ, ಲತಾಮಂಟಪಗಳು, ಪುಟ್ಟ ಜಲಪಾತದಂತೆ ಅಲೆ ಅಲೆಯಾಗಿ ನೀರು ಬೀಳುವುದು, ರಾಧಾಕೃಷ್ಣರ ಪ್ರತಿಮೆ ಇಲ್ಲಿನ ಆಕರ್ಷಣೆಗಳು. ಬಾಲೋದ್ಯಾನವೂ ಇದೆ. ರಸಿಕರಿಗೆ ಇದೊಂದು ಉತ್ತಮ ವಿಹಾರ ಸ್ಥಳವಾಗಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆ ಇಲ್ಲಿ ಇತ್ತೀಚೆಗೆ ನೃತ್ಯ ಕಾರಂಜಿ ಕಾರ್ಯಕ್ರಮದ ವ್ಯವಸ್ಥೆ ಮಾಡಿದೆ. ಇದೊಂದು ವಿನೂತನ ಪ್ರಯತ್ನ. ಹಿನ್ನೆಲೆ ವಾದ್ಯ ಸಂಗೀತಕ್ಕನುಸಾರವಾಗಿ ಈ ಕಾರಂಜಿ ಬೆಡಗು ಬಿನ್ನಾಣಗಳಿಂದ ನರ್ತಿಸುತ್ತದೆ. ಬೃಂದಾವನವನ್ನು ನೋಡಲು ಆಶಿಸಿ ದೇಶವಿದೇಶ ಗಳಿಂದ ಪ್ರವಾಸಿಗರು ಬರುತ್ತಾರೆ. ಪ್ರವಾಸೋದ್ಯಮ ಇದರಿಂದ ಬೆಳೆದಿದೆ, ಬೆಳೆಯುತ್ತಿದೆ.

ವಿದ್ಯುಚ್ಛಕ್ತಿ ಉತ್ಪಾದನೆ

ಭಾರತದಲ್ಲಿ ಪ್ರಪ್ರಥಮವಾಗಿ ಜಲವಿದ್ಯುಚ್ಛಕ್ತಿ ಉತ್ಪಾ ದನೆಗೆ ತೊಡಗಿದ ನಾಡು ಕರ್ನಾಟಕ. ಅದರಲ್ಲೂ ಮಂಡ್ಯ ಜಿಲ್ಲೆಗೆ ಈ ಅವಕಾಶ ಸಿಕ್ಕಿದ್ದು ಈ ಜಿಲ್ಲೆ ದಾಖಲೆಯನ್ನು ಸ್ಥಾಪಿಸು ವಂತಾಯಿತು. ವಿದ್ಯುಚ್ಛಕ್ತಿ ದಿನನಿತ್ಯದ ಬೇಡಿಕೆಗಳಲ್ಲೊಂದು. ಒಂದು ರಾಷ್ಟ್ರದ ಅಭ್ಯುದಯದ ದೃಷ್ಟಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆ ಬಹು ಮುಖ್ಯವಾದ ಕಾರ್ಯ. ನೀರಲ್ಲದೆ, ಉಷ್ಣ, ಅಣು, ಸೂರ್ಯ, ಮಾರುತ ಇವೇ ಮೊದಲಾದ ಶಕ್ತಿಮೂಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾದರೂ ಜಲಶಕ್ತಿಯನ್ನು ಬಳಸಿಕೊಂಡು ವಿದ್ಯುದುತ್ಪಾದನೆ ಮಾಡುವುದು ಸುಲಭ ಸಾಧ್ಯವೂ ಅಗ್ಗದ ವಿಧಾನವೂ ಆಗಿದೆ. ಕರ್ನಾಟಕದಲ್ಲಿ ಜಲವಿದ್ಯುತ್ತಿಗೆ ಬೇಕಾದ ಸಂಪನ್ಮೂಲಗಳಿದ್ದು ಇವುಗಳಲ್ಲಿ ಶೇಕಡಾ 40 ರಷ್ಟನ್ನು ಈಗಾಗಲೇ ಬಳಸಿಕೊಳ್ಳಲಾಗಿದೆ. ಮೊದಲಿಗೆ ಬಳಸಿಕೊಂಡದ್ದು ಕಾವೇರಿ ನದಿಯ ನೀರನ್ನು. ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಉದ್ದೇಶದಿಂದ 1902ರಲ್ಲಿ ಶಿವಸಮುದ್ರದಲ್ಲಿ ವಿದ್ಯುದುತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಇದೇ ಕರ್ನಾಟಕದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ. ಶಿವಸಮುದ್ರ ಮಳವಳ್ಳಿ ತಾಲ್ಲೂಕಿನ ದಕ್ಷಿಣಗಡಿಯಲ್ಲಿದೆ. ಶಿವಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರದ ಟರ್ಬೈನುಗಳನ್ನು ತಿರುಗಿಸುವುದಕ್ಕಾಗಿ ಪೆನ್‌ಸ್ಟಾಕ್ ಕೊಳವೆಗಳ ಮೂಲಕ ನೀರನ್ನು ಹರಿಸಲಾಗುತ್ತದೆ. ಇಲ್ಲಿ ಒಟ್ಟು ಹತ್ತು ವಿದ್ಯುಜ್ಜನಕಗಳಿವೆ. ಮೂರು ಮೆಗಾವಾಟ್ ಸಾಮರ್ಥ್ಯದ ಆರು ಘಟಕಗಳೂ ಆರು ಮೆಗಾವಾಟ್ ಸಾಮರ್ಥ್ಯದ ನಾಲ್ಕು ಘಟಕಗಳೂ ಇವೆ. ಇದನ್ನು ಕೆ. ಶೇಷಾದ್ರಿ ಅಯ್ಯರ್ ವಿದ್ಯುತ್ ಕೇಂದ್ರ ಎಂದೂ ಕರೆಯಲಾಗುವುದು. ಈ ಕೇಂದ್ರದಿಂದ ಕೋಲಾರದ ಚಿನ್ನದ ಗಣಿ ಪ್ರದೇಶಕ್ಕೆ ವಿದ್ಯುತ್ತನ್ನು ಹಾಯಿಸಲು 33 ಕಿಲೋ ವೋಲ್ಟ್‌ಗಳ 147 ಕಿ.ಮೀ. ಉದ್ದದ ಹೈವೋಲ್ಟೇಜ್ ಪ್ರಸರಣ ತಂತಿಗಳನ್ನು ಆ ಕಾಲದಲ್ಲಿ ಹಾಕಲಾಯಿತು. ವಿಶ್ವದಲ್ಲೇ ಇದು ಅತ್ಯಂತ ಉದ್ದವಾದ ಟ್ರಾನ್ಸ್‌ಮಿಷನ್ ಲೈನ್‌ಗಳೆಂದು ಆಗ ಇದೊಂದು ದಾಖಲೆಯಾಯಿತು. ಕರ್ನಾಟಕದ ಎರಡನೆಯ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು 1940ರಲ್ಲಿ ಮದ್ದೂರಿನಿಂದ 38 ಕಿ.ಮೀ. ದೂರದಲ್ಲಿರುವ ಶಿಂಷಾಪುರದಲ್ಲಿ ಸ್ಥಾಪಿಸಲಾಯಿತು. ಶಿಂಷಾಪುರ ಮಳವಳ್ಳಿ ತಾಲ್ಲೂಕಿನಲ್ಲಿ ಶಿವಸಮುದ್ರದಿಂದ 15

Sri Vidyabharathi Book Centre, Sringeri

CC-O. In Public Domain. Digitized by eGangotri

ಕಿ.ಮೀ. ದೂರದಲ್ಲಿದೆ. ಕಾವೇರಿ ನದಿಯ ನೀರಿನ ಸ್ವಲ್ಪ ಭಾಗವನ್ನು ಶಿಂಷಾ ಕಣಿವೆಗೆ ಹಾಯಿಸುವುದರ ಮೂಲಕ ಶಿಂಷಾಪುರದ ವಿದ್ಯುದುತ್ಪಾದನಾ ಕೇಂದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತದೆ. ಇಲ್ಲಿ ಎರಡು ವಿದ್ಯುಜ್ಜನಕಗಳಿವೆ. ಇಲ್ಲಿನ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 17,200 ಕಿಲೋವಾಟ್‌ಗಳು. 8.6 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳಿವೆ. (ಒಂದು ಮೆಗಾವಾಟ್‌ಗೆ ಸಾವಿರ ಕಿಲೋವಾಟ್‌ಗಳು). ಶಿವಸಮುದ್ರ ವಿದ್ಯುತ್‌ಕೇಂದ್ರದಿಂದ ವರ್ಷಕ್ಕೆ 175 ದಶಲಕ್ಷ ಯೂನಿಟ್‌ಗಳು, ಶಿಂಷಾಪುರ ಕೇಂದ್ರದಿಂದ ವರ್ಷಕ್ಕೆ 140 ದಶಲಕ್ಷ ಯೂನಿಟ್ ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ.

ಕರ್ನಾಟಕದಲ್ಲಿ ಪ್ರಸ್ತುತ ಅತ್ಯಧಿಕ ಪ್ರಮಾಣದ ವಿದ್ಯುಚ್ಛಕ್ತಿ ಅಗತ್ಯವಿದೆ. ಇದಕ್ಕಾಗಿ ಕಾಳಿ, ವರಾಹಿ ಮೊದಲಾದ ದೊಡ್ಡ ಜಲ ವಿದ್ಯುಚ್ಛಕ್ತಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಕಾಳಿಯೋಜನೆಯ ಮೊದಲ ಹಂತದ (ಉತ್ತರ ಕನ್ನಡ ಜಿಲ್ಲೆ) ಕಾರ್ಯಗಳು ಮುಗಿಯುತ್ತ ಬಂದಿವೆ. ಆದರೂ ದೊಡ್ಡ ಪ್ರಮಾಣದ ಯೋಜನೆಗಳು ಪೂರ್ಣಗೊಳ್ಳಲು ಹಲವಾರು ವರ್ಷಗಳು ಕಾಯಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ವಿದ್ಯುತ್ತಿನ ಉತ್ಪಾದನೆಗೆ ಅನ್ಯಮೂಲಗಳನ್ನು ಹುಡುಕಬೇಕಾದುದು ಅನಿವಾರ್ಯ. ತಕ್ಷಣದ ಬೇಡಿಕೆಗಳನ್ನು ಪೂರಯಿಸಲೂ ಬಹುದೂರವಲ್ಲದ ಗ್ರಾಮಾಂತರ ಪ್ರದೇಶಗಳ ಹಾಗೂ ಅಷ್ಟಾಗಿ ಅಭಿವೃದ್ಧಿ ಹೊಂದಿರದ ಪ್ರದೇಶಗಳಿಗೆ ವಿದ್ಯುತ್ತನ್ನು ಪೂರಯಿಸಲೂ ಸ್ವಲ್ಪಮಟ್ಟಿಗೆ ಪರಿಹಾರವನ್ನು ಒದಗಿಸ ಬಹುದಾದ ಸಣ್ಣ ಪ್ರಮಾಣದ ಜಲವಿದ್ಯುತ್ ಸ್ಥಾವರಗಳನ್ನು (ಮಿನಿ ಹೈಡಲ್ ಪ್ಲಾಂಟ್‌ಗಳು) ಸ್ಥಾಪಿಸಬೇಕೆಂಬ ಉದ್ದೇಶವನ್ನು ಕರ್ನಾಟಕ ಸರ್ಕಾರ ಇಟ್ಟುಕೊಂಡಿದೆ. ಇಂತಹ ಸ್ಥಾವರಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರ್ಮಿಸಲು ಬೇಕಾಗುವ ಅವಧಿ ಕಡಮೆ. ಈಗಾಗಲೇ ಲಭ್ಯವಿರುವ ಕಾವೇರಿ ನದಿಯ ಹಳೆ ಅಣೆಕಟ್ಟುಗಳು, ಇತರ ನೀರಾವರಿ ಅಣೆಕಟ್ಟುಗಳು ಮತ್ತು ನಾಲೆ ಇಳಿತ (ಕೆನಾಲ್ ಡ್ರಾಪ್)ಗಳ ಬಳಿಯೇ ಸಣ್ಣ ವಿದ್ಯುದಾಗಾರಗಳನ್ನು ನಿರ್ಮಿಸಬಹುದಾಗಿರುತ್ತದೆ. ಈ ವಿದ್ಯುದಾಗಾರಗಳಿಂದ ವರ್ಷಪೂರ್ತಿ ವಿದ್ಯುತ್ತನ್ನು ನಿರೀಕ್ಷಿಸಲಾಗುವುದಿಲ್ಲ. ನೀರಿನ ಹರಿವಿನ ಪ್ರಮಾಣ ಹೆಚ್ಚು ಇದ್ದಾಗ ಮಾತ್ರ ವಿದ್ಯುದುತ್ಪಾದನೆ ಸಾಧ್ಯ. ಹರಿಯುತ್ತಿರುವ ನೀರಿನ ಪ್ರಮಾಣ ಮತ್ತು ಅದು ಧುಮುಕುವ ಎತ್ತರ ಎರಡೂ ಅಂಶಗಳು ಮುಖ್ಯ.

ಮೊದಲ ಹಂತ್ರಿಯಾಗಿ ಈಗ ಲಭ್ಯವಿರುವ ನಿವೇಶನಗಳಲ್ಲಿ ಸುಮಾರು ಐದು ಅತಿ ಸಣ್ಣ ಪ್ರಮಾಣದ ಜಲವಿದ್ಯುದಾಗಾರಗಳ ಸ್ಥಾಪಿಸುವ ಯೋಜನೆಯನ್ನು ಕರ್ನಾಟಕ ಸರ್ಕಾರ ರೂಪಿಸಿದೆ. ಈ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ ಮಂಡ್ಯ ಸಮೀಪದ ವಿಶ್ವೇಶ್ವರಯ್ಯ ನಾಲೆಯ ಮದ್ದೂರು ಶಾಖೆಯ ಮೂವತ್ತನೆ ಕಿಲೋಮೀಟರಿನ ನಾಲೆ ಇಳಿತವನ್ನು ಬಳಸಿ ಎರಡು ಮೆಗಾವಾಟ್ ಸಾಮರ್ಥ್ಯದ ಒಂದು ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಜಿಲ್ಲೆಯ ಕೈಗಾರಿಕೆಗಳಿಗೆ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗೆ ಸದ್ಯದಲ್ಲಿ ವಿದ್ಯುತ್ ಸರಬರಾಜಿದೆ.

ಕಾವೇರಿ ನದಿಯ ಹಳೆ ಅಣೆಕಟ್ಟುಗಳ ನೀರನ್ನು ಹಾಗೂ ನಾಲೆ ಇಳಿತಗಳನ್ನು ಬಳಸಿ ಇನ್ನಷ್ಟು ಸಣ್ಣ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬಹುದಾಗಿದೆ. ಕೃಷ್ಣರಾಜ ಸಾಗರ ಅಣೆಕಟ್ಟಿನ ವಿದ್ಯುದಾಗಾರದ ಕೆಲಸದ ಯೋಜನೆಯೂ ಕಾರ್ಯಗತವಾಗಬೇಕಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈಗಾರಿಕೆಗಳು

ಮಂಡ್ಯ ಜಿಲ್ಲೆ ಹಲವಾರು ವಿಶಿಷ್ಟ ಕೈಗಾರಿಕೆಗಳಿಗೆ ಹೆಸರಾಗಿದೆ. ಸಕ್ಕರೆ ಹಾಗೂ ಕಾಗದ ಉದ್ಯಮ ಮಂಡ್ಯ ಜಿಲ್ಲೆಯಲ್ಲಿದೆ. ಅನೇಕ ಗೃಹ ಕೈಗಾರಿಕೆಗಳು ಜಿಲ್ಲೆಯ ತುಂಬ ಇವೆ. ಮಂಡ್ಯ ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಗಳ ಉಗಮವಾದುದು ಮಂಡ್ಯದ ಸಕ್ಕರೆ ಕಾರ್ಖಾನೆಯು ಆರಂಭವಾದಂದಿನಿಂದ ಎನ್ನಬಹುದು.

ಇಲ್ಲಿರುವ ಕೈಗಾರಿಕೆಗಳನ್ನು ಪರಿಚಯ ಮಾಡಿಕೊಳ್ಳೋಣ.

ಸಕ್ಕರೆ ಕಾರ್ಖಾನೆಗಳು

ಕರ್ನಾಟಕದ ದೊಡ್ಡ ಪ್ರಮಾಣದ ಉದ್ಯಮಗಳಲ್ಲಿ ಸಕ್ಕರೆ ಉದ್ಯಮ ಎರಡನೆಯದು. ಇದೊಂದು ಕೃಷಿ ಆಧಾರಿತ ಉದ್ಯಮ. ಮೂಲವಸ್ತು ಕಬ್ಬು.

ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಪ್ರದೇಶಗಳಿವೆ, ತಕ್ಕ ಭೂಮಿ, ಹವಾಗುಣವಿದೆ. ಕಾರ್ಖಾನೆ ನಡೆಸಲು ವಿದ್ಯುಚ್ಛಕ್ತಿ ಪೂರೈಕೆ ಇದೆ. ಜನಬಲವೂ ಇದೆ. ಮಂಡ್ಯ ಜಿಲ್ಲೆಯಲ್ಲಿ ಸರ್ಕಾರದ ಸ್ವಾಧೀನದಲ್ಲಿ ಒಂದು ಕಾರ್ಖಾನೆಯೂ, ಸಹಕಾರಿ ಕ್ಷೇತ್ರದಲ್ಲಿ ಒಂದು ಕಾರ್ಖಾನೆಯೂ ಹಾಗೂ ಖಾಸಗಿ ಕ್ಷೇತ್ರದಲ್ಲಿ ಒಂದು ಕಾರ್ಖಾನೆ ಇದೆ. ಒಟ್ಟು ಮೂರು ಸಕ್ಕರೆ ಕಾರ್ಖಾನೆಗಳಿವೆ.

1) ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ (ಸರ್ಕಾರದ ಸ್ವಾಧೀನ)

2) ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ಪಾಂಡವಪುರ (ಸಹಕಾರಿ ಕ್ಷೇತ್ರ).

3) ಶ್ರೀ ಚಾಮುಂಡೇಶ್ವರಿ ಷುಗರ್ ಲಿಮಿಟೆಡ್, ಕಾಳ

Sri Vidyabharathi Book Centre, Sringeri

CC-O. In Public Domain. Digitized by eGangotri



ಮಂಡಿಸಿದ ಸಭೆಯ ಕಾರ್ಯದರ್ಶಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು (ಖಾಸಗಿ ಕ್ಷೇತ್ರದ ಕಾರ್ಖಾನೆ).

ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಭಾರತದ ಅತ್ಯಂತ ದೊಡ್ಡ ಕಾರ್ಖಾನೆಗಳಲ್ಲಿ ಒಂದಾಗಿದೆ. ಇದನ್ನು 1933ರಲ್ಲಿ ಸ್ಥಾಪಿಸಲಾಯಿತು. ಕರ್ನಾಟಕದ ಮೊಟ್ಟಮೊದಲನೆಯ ಸಕ್ಕರೆ ಕಾರ್ಖಾನೆ ಇದು. ಆಗಷ್ಟೇ ಮೈಸೂರಿನಲ್ಲಿ ಕೈಗಾರಿಕೆಗಳು ತಲೆ ಎತ್ತಬೇಕೆಂದು ಔದ್ಯಮೀಕರಣದ ಮಹತ್ವವನ್ನು ಕೈಗಾರಿಕೆಯ ರೂವಾರಿ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳುತ್ತ ಬಂದಿದ್ದರು. ಈ ಕಾಲಕ್ಕೆ ಸ್ಥಾಪನೆಯಾದ ಸಕ್ಕರೆ ಕಾರ್ಖಾನೆ ಒಂದು ದಿಟ್ಟ ಹೆಜ್ಜೆ. ಈ ಕಾರ್ಖಾನೆಯಲ್ಲಿ ದಿನವೊಂದಕ್ಕೆ 4000 ಮೆಟ್ರಿಕ್ ಟನ್‌ಗಳಷ್ಟು ಕಬ್ಬನ್ನು ಅರೆಯಲಾಗುತ್ತದೆ.

ಸಕ್ಕರೆ ತಯಾರಿಕೆ

ಗದ್ದೆಗಳಲ್ಲಿ ಬೆಳೆದ ಕಬ್ಬನ್ನು ಸಣ್ಣ ತುಂಡುಗಳನ್ನಾಗಿ ಮಾಡಿ ಸಕ್ಕರೆ ಕಾರ್ಖಾನೆಗೆ ಕಳುಹಿಸಲಾಗುತ್ತದೆ. ಮುಖ್ಯವಾಗಿ ಕಬ್ಬು ಬೆಳೆಯುವ ಪ್ರದೇಶಕ್ಕೆ ಕಾರ್ಖಾನೆ ಸಮೀಪವಿದ್ದರೆ ಉತ್ತಮ. ಏಕೆಂದರೆ ಕತ್ತರಿಸಿದ ಕಬ್ಬನ್ನು ಬಹಳ ದಿನ ಇಡುವಂತಿಲ್ಲ. ಒಣಗಿ ಹೋಗುತ್ತದೆ. ಹಿಂಡು ಯಂತ್ರಕ್ಕೆ ಕಬ್ಬಿನ ತುಂಡು ಅಥವಾ ಪುಡಿಗಳನ್ನೂ ನೀಡಿ ರಸವನ್ನೆಲ್ಲ ಹಿಂಡಿಕೊಳ್ಳಲಾಗುತ್ತದೆ. ರಸವನ್ನು ಕಳೆದುಕೊಂಡ ಕಬ್ಬಿನ ಜೊಂಡೆಯನ್ನು ಬಗಸೆ ಅಥವಾ ಕಬ್ಬಿನ ಹಿಪ್ಪೆ ಎನ್ನುತ್ತಾರೆ. ಸಾಧ್ಯವಿದ್ದಷ್ಟೂ ರಸವನ್ನು ತೆಗೆಯಲಾಗುತ್ತದೆ. ಹೀಗೆ ಹಿಂಡುಯಂತ್ರದಿಂದ ತೆಗೆದ ರಸದಲ್ಲಿ ಕಶ್ಮಲಗಳಿರುತ್ತವಲ್ಲದೆ ನೀರಿನ ಅಂಶವೂ ಇರುತ್ತದೆ. ಕಶ್ಮಲ ಮತ್ತು ನೀರಿನ ಅಂಶವನ್ನು ತೆಗೆಯುವ ಮೊದಲು ರಸಕ್ಕೆ ಸುಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಣ್ಣವನ್ನು ಸೇರಿಸುತ್ತಾರೆ. ಆಗ ಕಶ್ಮಲಗಳು ನೊರೆಯಂತೆ ಮೇಲ್ಭಾಗಕ್ಕೆ ಬಂದು ನಿಲ್ಲುತ್ತದೆ. ಸೋಸುವುದರ ಮೂಲಕ ಕಶ್ಮಲಗಳನ್ನು ತೆಗೆಯಲಾಗುತ್ತದೆ. ಇಲ್ಲವೆ ರಸವನ್ನು ಕುದಿಸಿ ಕಶ್ಮಲವನ್ನು ತೆಗೆಯುತ್ತಾರೆ. ಮುಂದೆ ಕಬ್ಬಿನ ರಸವನ್ನು ಮತ್ತಷ್ಟು ಕಾಯಿಸಿ ನೀರಿನ ಅಂಶ ಇಂಗುವಂತೆ ಮಾಡುತ್ತಾರೆ. ಉಳಿದ ರಸ ಸಕ್ಕರೆಯ ಅಂಶವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುತ್ತದೆ. ದೊಡ್ಡ ಪಾತ್ರೆಗಳಲ್ಲಿ ರಸವನ್ನು ಕುದಿಸಿದಾಗ ಕಂದುಬಣ್ಣದ ಹರಳು ರೂಪದ ಕಾಕಂಬಿ (Molasses) ಸಿಗುತ್ತದೆ. ಸಕ್ಕರೆ ಹರಳುಗಳನ್ನು ಕಾಕಂಬಿಯಿಂದ ಬೇರೆ ಮಾಡಲು ಕೇಂದ್ರಾಪಗಾಮಿ ಯಂತ್ರಗಳಲ್ಲಿ ಕಾಕಂಬಿಗಳನ್ನು ಹಾಕಿ ಯಂತ್ರ ಚಲಿಸುವಂತೆ ಮಾಡುತ್ತಾರೆ. ಆಗ ಕಾಕಂಬಿ ರಂಧ್ರಗಳ ಮೂಲಕ ಹೊರಬೀಳುತ್ತದೆ. ಹರಳುಗಳು ಒಳಗೆ ಉಳಿಯುತ್ತವೆ. ಕಂದುಬಣ್ಣದ ಈ ಸಕ್ಕರೆಗೆ ಕಚ್ಚಾಸಕ್ಕರೆ ಎನ್ನುತ್ತಾರೆ. ಇದರ ಬಣ್ಣ ತೆಗೆದು ಸಂಸ್ಕರಿಸಿ ಬಿಳಿ ಸಕ್ಕರೆಯನ್ನು ಪಡೆಯುತ್ತಾರೆ.

ಸಕ್ಕರೆಯನ್ನು ಬೀಟ್ ಸಸ್ಯದ ಬೇರನ್ನು ಉಪಯೋಗಿಸಿಯೂ ತಯಾರಿಸಲಾಗುತ್ತದೆ. ನಮ್ಮ ದೇಶದಲ್ಲಿ ಹೆಚ್ಚಾಗಿ ಕಬ್ಬಿನಿಂದಲೇ ಸಕ್ಕರೆ ಪಡೆಯುತ್ತಾರೆ. ಕೆಲವು ದೇಶಗಳಲ್ಲಿ ಮುಸುಕಿನ ಜೋಳ, ಮರದ ನಾರುಗಳಿಂದಲೂ ಸಕ್ಕರೆ ತೆಗೆಯುವುದು ರೂಢಿಯಲ್ಲಿದೆ.

ಮಂಡ್ಯ ಜಿಲ್ಲೆಯಲ್ಲಿ ಕಬ್ಬಿನ ಬೆಳೆ ಅಧಿಕವಾಗಿದ್ದುದು ಮತ್ತೆರಡು ಸಕ್ಕರೆ ಕಾರ್ಖಾನೆಗಳನ್ನು ತೆಗೆಯಲು ಅವಕಾಶ ಮಾಡಿಕೊಟ್ಟಿತು. ಪಾಂಡವಪುರದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 1959ರಲ್ಲೂ ಮದ್ದೂರು ತಾಲ್ಲೂಕಿನ ಕಾಳಮದ್ದನದೊಡ್ಡಿಯಲ್ಲಿ 1974ರಲ್ಲಿ ಒಂದು ಖಾಸಗಿ ಒಡೆತನದ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ. ಕಾಳಮುದ್ದನದೊಡ್ಡಿಯ ಕಾರ್ಖಾನೆಗೆ ಮದ್ದೂರು

SriVidyabharathi Book Centre, Sringeri

CC-O. In Public Domain. Digitized by eGangotri

ಹಾಗೂ ಮಳವಳ್ಳಿ ತಾಲ್ಲೂಕುಗಳಲ್ಲಿ ಬೆಳೆಯುವ ಕಬ್ಬನ್ನು ಅರೆಯಲು ಕಳುಹಿಸಲಾಗುತ್ತದೆ. ಈ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ ದಿನವೊಂದಕ್ಕೆ 1250 ಮೆಟ್ರಿಕ್ ಟನ್ನುಗಳು. ಪಾಂಡವಪುರದ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ ದಿನವೊಂದಕ್ಕೆ 1500 ಮೆಟ್ರಿಕ್ ಟನ್ನುಗಳು. ಈ ಕಾರ್ಖಾನೆಗಳಲ್ಲಿ ಕೆಲವು ಮಾದಕಪಾನೀಯಗಳನ್ನು ತಯಾರುಮಾಡಲಾಗುತ್ತದೆ. ಮಂಡ್ಯ ಮತ್ತು ನಗುವನಹಳ್ಳಿಯಲ್ಲಿ ಖಂಡಸಾರಿ ಸಕ್ಕರೆ ಉತ್ಪಾದನೆಯಿದೆ.

ಸಕ್ಕರೆ ತಯಾರಿಕೆಯಲ್ಲಿ ಉತ್ಪತ್ತಿಯಾಗುವ ಉಪ ಪದಾರ್ಥಗಳು ಅನೇಕ ಇತರ ಕೈಗಾರಿಕೆಗಳಿಗೆ ಆಧಾರವಾಗಿದೆ. ಕಬ್ಬಿನ ಸಿಪ್ಪೆ ಮತ್ತು ಕಾಕಂಬಿ ಈ ಎರಡು ಉಪ ಪದಾರ್ಥಗಳು ಅವು. ಕಬ್ಬಿನ ಸಿಪ್ಪೆ ಮೊದಲಿಗೆ ಇಂಧನವಾಗಿ ಬಳಸಲ್ಪಡುತ್ತಿತ್ತು. ಈಗ ಆ ಉಪಯೋಗದ ಜೊತೆಗೆ ಕಾಗದ ತಯಾರಿಕೆಗೆ ಒಳ್ಳೆಯ ಕಚ್ಚಾ ಪದಾರ್ಥವಾಗಿ ಉಪಯೋಗವಾಗುತ್ತಿದೆ. ಕಾಕಂಬಿಯನ್ನು ಮದ್ಯ ಪಾನೀಯಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. ಕಬ್ಬಿನ ರಸದಲ್ಲಿ ಉತ್ಪತ್ತಿಯಾಗುವ ಅನೇಕ ರಾಸಾಯನಿಕ ಪದಾರ್ಥಗಳಲ್ಲಿ ಅಕೊನಿಟೆಕ್ ಆಮ್ಲವೂ ಒಂದು. ಇದನ್ನು ಒಳ್ಳೆಯ ಪ್ಲಾಸ್ಟಿಕ್ ತಯಾರಿಸಲು ಉಪಯೋಗಿಸಬಹುದಾಗಿದೆ.

ಕಬ್ಬಿನಿಂದ ಬೆಲ್ಲ ತಯಾರಿಸುವುದೂ ಒಂದು ದೊಡ್ಡ ಉದ್ಯಮವೇ. ಹಲವು ಗ್ರಾಮಗಳಲ್ಲಿ ಇದೊಂದು ಗುಡಿಕೈಗಾರಿಕೆಯಾಗಿ ಬೆಳೆದಿದೆ.

ಕಾಗದ ಕೈಗಾರಿಕೆ

ಸಕ್ಕರೆ ಕಾರ್ಖಾನೆಗಳಲ್ಲಿ ಅಗಾಧ ಪ್ರಮಾಣದಲ್ಲಿ ಉಂಟಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುವ ಬಗಸೆ ಅಥವಾ ಕಬ್ಬಿನ ಹಿಪ್ಪೆಯನ್ನು ಉಪಯೋಗಿಸಿ ಕಾಗದ ತಯಾರಿಸಬಹುದು. ಕಬ್ಬಿನ ಸಿಪ್ಪೆಯ ಉಪಯೋಗದಿಂದ ಕಾಗದ ವನ್ನು ಮಂಡ್ಯ ಜಿಲ್ಲೆಯ ಬೆಳಗೊಳದಲ್ಲಿರುವ ಮಂಡ್ಯ ನ್ಯಾಷನಲ್ ಪೇಪರ್‌ಮಿಲ್ಸ್ ತಯಾರಿಸುತ್ತಿದೆ. ಈ ಕಾರ್ಖಾನೆ 1962ರಲ್ಲಿ ಕಾರ್ಯಾರಂಭ ಮಾಡಿತು. ಉತ್ತಮ ಕಾಗದವನ್ನು ತಯಾರಿಸಲು ಸುಧಾರಿತ ವಿಧಾನಗಳನ್ನು ಇಲ್ಲಿ ರೂಪಿಸಲಾಗಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಕೈಗಾರಿಕೆಗಳ ಕ್ಷೇತ್ರವಾಗಿದೆ. ಇಲ್ಲಿನ ಇನ್ನೊಂದು ಕೈಗಾರಿಕೆ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆ. ಇದು 1937ರಲ್ಲಿ ಕಾರ್ಯಾರಂಭಮಾಡಿತು. ಇಲ್ಲಿ ರಾಸಾಯನಿಕ ಗೊಬ್ಬರ ಗಳನ್ನು ತಯಾರಿಸುತ್ತಾರೆ. ಭಾರತದಲ್ಲಿ ಮೊದಲಿಗೆ ತಾಮ್ರದ ಸಲ್ಫೇಟನ್ನು ತಯಾರಿಸಿದ್ದು ಇಲ್ಲಿಯೇ. ಇದೇ ರೀತಿ ಮೈಸೂರ್ ಕೆಮಿಕಲ್ ಮ್ಯಾನುಫ್ಯಾಕ್ಚರರ್ಸ್ ಎಂಬ ಕಾರ್ಖಾನೆ,ಅಲೈಡ್‌ರೆಸಿನ್ಸ್ ಅಂಡ್ ಕೆಮಿಕಲ್ಸ್ ಎಂಬ ಕಾರ್ಖಾನೆಗಳು ಬೆಳಗೊಳದಲ್ಲಿದ್ದು ಇಲ್ಲಿ ಯೂರಿಯಾ, ಫಾರ್ಮಾಲ್‌ಡಿಹೈಡ್, ರೆಸಿನ್, ಡಬಲ್ ಸಲ್ಫೇಟ್‌ಗಳ ತಯಾರಿಕೆ ಇದೆ.

ಮಂಡ್ಯದ ಮೈಸೂರ್ ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಜಿಲ್ಲೆಯ ಒಂದು ಕೈಗಾರಿಕೆ. ಇಲ್ಲಿ ಹತ್ತಿಯ ಗಿರಣಿಗಳಲ್ಲಿ ವ್ಯರ್ಥವಾಗಿ ಬಿಸುಡುವ ಹತ್ತಿಯ ಜುಂಗನ್ನು ಶುದ್ಧ ಮಾಡಿ ಚೆಲುವೆಗೊಳಿಸಿ ಬೆಣ್ಣೆ ಮುದ್ದೆ ಆಗುವಂತೆ ಮಾಡುತ್ತಾರೆ. ವಿವಿಧ ರಾಸಾಯನಿಕ ಕ್ರಿಯೆಗಳಿಗೊಳಗು ಮಾಡಿ ಸೆಲ್ಯುಲಾಯಿಡ್, ವಿಸ್ಕೋಸ್ ರೆಯಾನ್, ಸೆಲ್ಯುಲೋಸ್ ಅಸಿಟೇಟ್, ಅಸಿಟೇಟ್ ಪ್ಲಾಸ್ಟಿಕ್, ಸೆಲೋಫೇನ್ ಎಂಬ ದ್ರವ್ಯಗಳನ್ನು ತಯಾರಿಸುತ್ತಾರೆ. ಈ ವಸ್ತುಗಳನ್ನು ಪ್ಲಾಸ್ಟಿಕ್ ಉತ್ಪಾದನೆಗಳಿಗೆ, ಚಾಕೊಲೇಟ್ ಸುತ್ತುವ ಕಾಗದ ತಯಾರಿಕೆಗೆ, ಛಾಯಾಚಿತ್ರ ಉದ್ಯಮಕ್ಕೆ,

Sri Vidyabharathi Book Centre, Sringeri

CC-O. In Public Domain. Digitized by eGangotri



ವಿಶ್ವೇಶ್ವರ ಕಾಗದ ಕಾರ್ಖಾನೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಪೆಲ್ಲಗುರು ಅಗಿಚೀಟಿ ಅಂಡ್ ಕೆಮಿಕಲ್ಸ್, ಮಂಡ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡಕದ ಚೌಕಟ್ಟುಗಳ ತಯಾರಿಕೆಗೆ, ಬಾಚಣಿಗೆಗಳ ತಯಾರಿಕೆಗೆ, ಪೆನ್, ಸ್ಕ್ರಾಪ್ರೈವರ್, ಹಲ್ಲುಜ್ಜುವ ಬ್ರಷ್‌ಗಳ ತಯಾರಿಕೆಗೆ ದೇಶದ ನಾನಾ ಭಾಗಗಳಿಗೆ ಕಳುಹಿಸಿಕೊಡುತ್ತಾರೆ. ಇದೊಂದು ಲಾಭಕರ ಉದ್ಯಮ.

1966ರಲ್ಲಿ ಮಂಡ್ಯದಲ್ಲಿ ಉಪಕರಣಗಳ ತಯಾರಿಕೆ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ. ಸಕ್ಕರೆ ಕಾರ್ಖಾನೆಗೆ ಹೊಂದಿಕೊಂಡಂತೆ ಮದ್ಯಸಾರ ಮತ್ತು ಮದ್ಯ ತಯಾರಿಕೆ ಕಾರ್ಖಾನೆ ಇದೆ. ಮೈಸೂರ್ ಮೆಟಲ್ ಇಂಡಸ್ಟ್ರೀಸ್, ಮಂಡ್ಯ ಎಂಜಿನಿಯರಿಂಗ್ ವರ್ಕ್ಸ್, ಆಧುನಿಕ ಅಕ್ಕಿ ಗಿರಣಿ, ಮೈಸೂರ್ ಮಿನರಲ್ಸ್ ಅಂಡ್ ಗ್ಯಾಸ್ ಕಂಪನಿ ಇವು ಮಂಡ್ಯ ನಗರದ ಇತರ ಕೈಗಾರಿಕೆಗಳು. ಇವೇ ಅಲ್ಲದೆ ಸಣ್ಣ ಪ್ರಮಾಣದ ಹಲವು ಕೈಗಾರಿಕೆಗಳಿದ್ದು ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಪೂರಕವಾಗಿ ಸರ್ಕಾರವು ಮಂಡ್ಯದಲ್ಲಿ ಕೈಗಾರಿಕಾ ಎಸ್ಟೇಟನ್ನು ಸ್ಥಾಪಿಸಿದೆ. ಮಂಡ್ಯ ಪಟ್ಟಣ ಕೃಷ್ಣರಾಜಸಾಗರ ನಿರ್ಮಾಣವಾದ ನಂತರ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ನೀರಿನ ಸೌಕರ್ಯದಿಂದಾಗಿ ಹಲವು ಕೈಗಾರಿಕೆಗಳ ಸ್ಥಾಪನೆಯಾಗಲು ಅವಕಾಶವಾಯಿತು. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಪರಿಶೋಧನಾ ವಿಭಾಗವನ್ನು ಹೊಂದಿದೆ.

ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿ, ಸಿಂದಘಟ್ಟಗಳಲ್ಲಿ, ಪಾಂಡವಪುರ ತಾಲ್ಲೂಕಿನಲ್ಲಿ ಕೈಮಗ್ಗ ಹಾಗೂ ರೇಷ್ಮೆ ನೂಲುವ ಉದ್ಯಮವಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಕೊಡಿಯಾಲ ಕೈಮಗ್ಗ ಬಟ್ಟೆಗಳಿಗೆ ಪ್ರಸಿದ್ಧಿಯಾಗಿದೆ. ಇಲ್ಲಿ ಸೀರೆ ತಯಾರಿಕೆ ಇರುವಂತೆಯೇ ಮಳವಳ್ಳಿ ತಾಲ್ಲೂಕಿನ ತಳಗಲವಾಡಿ, ಕೆ.ಆರ್. ಪೇಟೆ ತಾಲ್ಲೂಕಿನ ಹೂಸ ಹೊಳಲುಗಳಲ್ಲಿಯೂ ಇದೆ. ಮೇಲುಕೋಟೆಯಲ್ಲಿ ತಯಾರಾಗುವ ಕೈಮಗ್ಗದ ಧೋತಿ ಪ್ರಸಿದ್ಧವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದ್ದೂರು, ಹುಲ್ಲಿಗಾಲ, ಬೆಳ್ಳಿಗೆರೆಯಲ್ಲಿ ಕುಂಬಾರಿಕೆ ಇದೆ. ಮಳವಳ್ಳಿ ತಾಲ್ಲೂಕು ಚರ್ಮದ ವಸ್ತುಗಳು ಹಾಗೂ ಪಾದರಕ್ಷೆಗಳ ತಯಾರಿಕೆಗೆ ಹೆಸರಾಗಿದೆ. ಇವೆಲ್ಲ ಗ್ರಾಮಕೈಗಾರಿಕೆಗಳಾಗಿ ರೂಪು ಗೊಂಡಿವೆ. ನಾಗಮಂಗಲ, ಸಿಂದಘಟ್ಟಗಳಲ್ಲಿ ಜಾಪೆ ಹೆಣಿಗೆ ಇದೆ. ನಾಗಮಂಗಲ ವಿಶೇಷವಾಗಿ ಹಿತ್ತಾಳೆ, ಕಂಚಿನ ವಿಗ್ರಹಗಳನ್ನು ಮಾಡುವ ಕಸಬುದಾರರನ್ನು ಪಡೆದಿದೆ. ಲೋಹದ ಗುಡಿ ಕೈಗಾರಿಕೆ ಇಲ್ಲಿನ ಉದ್ಯಮ. ಇಲ್ಲಿ ತಯಾರಾಗುವ ಪೂಜಾ ಉಪಕರಣಗಳು, ವಿಗ್ರಹಗಳಿಗೆ ದೇಶಾದ್ಯಂತ ಬೇಡಿಕೆ ಇದೆ. ಕಸಬುದಾರರ ತರಬೇತಿ ಸಂಸ್ಥೆ ಇಲ್ಲಿದೆ. ನಾಗಮಂಗಲ ತಾಲ್ಲೂಕಿನಲ್ಲಿ ಕಂಬಳಿ ನೇಯ್ಗೆ, ಎಣ್ಣೆ ತೆಗೆಯುವ ಉದ್ಯಮಗಳಿವೆ. ಪಾಂಡವಪುರ ತಾಲ್ಲೂಕಿನಲ್ಲಿ ಕೃಷಿ ಉಪಕರಣಗಳನ್ನು ತಯಾರಿಸುವ ಬಡಗಿ ಹಾಗೂ ಕಮ್ಮಾರ ಉದ್ಯಮಗಳಿವೆ. ಮದ್ದೂರಿನ ನಿಡಘಟ್ಟದ ಸಮೀಪದಲ್ಲಿ ತೆಂಗಿನನಾರು ಕೈಗಾರಿಕಾ ಕೇಂದ್ರವಿದೆ. ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ಗ್ರಾಮದ ಸಮೀಪದಲ್ಲಿ ಸ್ಕೂಟರ್ ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ. ಇದೊಂದು ದೊಡ್ಡ ಉದ್ಯಮ. ಶ್ರೀರಂಗಪಟ್ಟಣದಲ್ಲಿ ರೇಷ್ಮೆ ನೂಲು ಸಂಸ್ಕರಣ ಕೇಂದ್ರವಿದೆ. ಜೀನುಸಾಕಣೆ ಈ ತಾಲ್ಲೂಕಿನಲ್ಲಿ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಅರಕೆರೆ ಎಂಬಲ್ಲಿ ಕಚ್ಚಾ ಕಾಗದದ ಕಾರ್ಖಾನೆ ರೂಪುಗೊಂಡಿದೆ.

ಮಂಡ್ಯ ಜಿಲ್ಲೆಯಲ್ಲಿ ಬೆಲ್ಲ ತಯಾರಿಕೆಯೂ ಇದೆ. ಅಕ್ಕಿ ಗಿರಣಿಗಳು ಹೆಚ್ಚು. ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಗಳು ಪ್ರಗತಿಪರವಾಗಿವೆ. ಆದಾಗ್ಯೂ ತಾಲ್ಲೂಕು ಕೇಂದ್ರಗಳಲ್ಲಿ ಹೋಬಳಿ ಗಳಲ್ಲಿ ಕೈಗಾರಿಕೆಗಳು ಇನ್ನೂ ರೂಪುಗೊಳ್ಳಬೇಕಾಗಿವೆ. ಖನಿಜೋದ್ಯಮ ಸರಿಯಾಗಿ ಅಭಿವೃದ್ಧಿಯಾಗಿಲ್ಲ. ಹಳ್ಳಿಗಳಲ್ಲಿ ಸಣ್ಣ ಗುಡಿ ಕೈಗಾರಿಕೆಗಳಿಗೆ ಅವಕಾಶ ಮಾಡಿಕೊಡಬೇಕಾಗಿದೆ. ಅರಣ್ಯಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳೆಯಿಸುವ ಅಗತ್ಯವಿದೆ. ಹೇಳಿಕೊಳ್ಳಬಹುದಾದಂಥ ಅರಣ್ಯ ಕೈಗಾರಿಕೆಗಳು ಇಲ್ಲಿ ಬೆಳೆದಿಲ್ಲ.

ರಾಜ್ಯ ಕೈಗಾರಿಕಾ ನಿರ್ದೇಶನಾಲಯದ ಸೂಚಿಯೊಂದರ ಪ್ರಕಾರ ಮಂಡ್ಯ ತಾಲ್ಲೂಕೊಂದೇ ಕೈಗಾರಿಗಳ ಅಭಿವೃದ್ಧಿಗೆ ಗೊತ್ತಾಗಿರುವ ಪ್ರದೇಶ. ಉಳಿದೆಲ್ಲ ತಾಲ್ಲೂಕುಗಳು ಕೈಗಾರಿಕೆ ದೃಷ್ಟಿಯಿಂದ ಕಡಮೆ ಅಭಿವೃದ್ಧಿ ಹೊಂದಿರುವ ಪ್ರದೇಶಗಳು. ಜಿಲ್ಲೆಯಲ್ಲಿ ಇನ್ನೂ ಹಲವು ಕೈಗಾರಿಕೆಗಳ (ದೊಡ್ಡ ಹಾಗೂ ಸಣ್ಣ ಪ್ರಮಾಣದ) ಸ್ಥಾಪನೆಗೆ ಅವಕಾಶವಿದೆ.

ಬಗಸೆ ಅಥವಾ ಕಬ್ಬಿನ ಹಿಪ್ಪೆಯಿಂದ ದಪ್ಪರಟ್ಟು, ಧ್ವನಿ ತರಂಗಗಳನ್ನು ಹೀರಬಲ್ಲ ಹಲಗೆ ತಯಾರಿಕೆ, ಅಕ್ಕಿಯ ತೌಡಿನಿಂದ ಎಣ್ಣೆ ತಯಾರಿಕೆ (ನೆಟ್ಕಲ್ ಕೆರೆ ಎಂಬಲ್ಲಿ ಒಂದು ಕಾರ್ಖಾನೆ ಇದೆ), ಹಲ್ಲುಪುಡಿ ತಯಾರಿಕೆ, ಖಂಡಸಾರಿ ಸಕ್ಕರೆ, ಚರ್ಮ ವಸ್ತುಗಳು, ಸಿಮೆಂಟ್ ಮತ್ತು ಕಲ್ಲಾರಿನ ಉತ್ಪಾದನೆಗಳು, ಜೇನು ತುಪ್ಪ ತಯಾರಿಕೆ, ಮಣ್ಣಿನ ವಸ್ತುಗಳ ತಯಾರಿಕೆ, ತೆಂಗಿನ ನಾರಿನ ವಸ್ತುಗಳು, ಅಸಿಟೇಟ್ ಕಾರ್ಖಾನೆಯಲ್ಲಿ ತಯಾರಾಗುವ ರಾಸಾಯನಿಕ ವಸ್ತುಗಳಿಂದ ತಯಾರಿಸಬಹುದಾದ ಹಲವಾರು ಉಪಯುಕ್ತ ಸಾಧನೆಗಳ ತಯಾರಿಕೆ ಈ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ. ಪಶುಪಾಲನೆಗೆ ಹೆಚ್ಚು ಅವಕಾಶ ಮಾಡಿಕೊಟ್ಟು ಹಾಲು, ಹಯನು, ಉಣ್ಣೆ, ಕೋಳಿಮೊಟ್ಟೆ ಇವುಗಳ ಉತ್ಪಾದನೆ ಹೆಚ್ಚಿಸಬಹುದು. ಡೈರಿ ಉತ್ಪಾದನೆಗಳಿಗೂ ಅವಕಾಶ ಮಾಡಿಕೊಡಬೇಕಾಗಿದೆ. ಮಂಡ್ಯ ಪಟ್ಟಣ ಒಂದರಲ್ಲೇ ಕೈಗಾರಿಕೆಗಳನ್ನು ಕೇಂದ್ರೀಕೃತಗೊಳಿಸದೆ ತಾಲ್ಲೂಕುಗಳ ಮುಖ್ಯ ಸ್ಥಳಗಳಲ್ಲಿಯೂ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದು ಅಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳನ್ನು ಮಾಡಿಕೊಡುವ ದೃಷ್ಟಿಯಿಂದ ಅಗತ್ಯ. ಇಲ್ಲಿ ಜನಸಂಪನ್ಮೂಲಗಳು ಇವೆ. ಕೃಷಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಖ್ಯ ಕಸುಬಾಗಿಟ್ಟುಕೊಂಡಿರುವ ಹಲವು ಜನಾಂಗಗಳ ಜನರಿದ್ದಾರೆ. ಆದಿಕರ್ನಾಟಕರು, ಒಕ್ಕಲಿಗರು, ಕುರುಬರು, ಮೇದಾರರು, ಉಪ್ಪಾರರು, ದೇವಾಂಗದವರು, ಬೆಸ್ತರು, ಬೇಡರು, ಅಗಸರು, ಬಣಜಿಗರು, ಸಾತಾನಿಗಳು, ವಿಶ್ವಕರ್ಮರು, ತಿಗಳರು, ಪೊಡ್ಡರು ಮೊದಲಾದ ಜನಾಂಗಗಳು ಇಲ್ಲಿವೆ. ರಸ್ತೆ ನಿರ್ಮಾಣ, ಬಾವಿ ಕೆರೆ ತೋಡುವ ಕಾರ್ಯದಲ್ಲಿ ಪೊಡ್ಡರು ನೆರವಾಗುತ್ತಾರೆ. ಉಪ್ಪಾರರು ಈಗ ಕೃಷಿಯನ್ನು ಮುಖ್ಯ ಕಸುಬಾಗಿಟ್ಟುಕೊಂಡಿದ್ದಾರೆ.

ಮಂಡ್ಯ ಜಿಲ್ಲೆ ಉತ್ತಮ ಮಾರ್ಗಸಂಪರ್ಕಗಳನ್ನು ಹೊಂದಿದೆ. ಮೈಸೂರು, ಬೆಂಗಳೂರುಗಳ ನಡುವೆ ಮಂಡ್ಯ ಇದ್ದು ರೈಲುಸಂಪರ್ಕವಿದೆ. ಜಿಲ್ಲೆಯ ನಾಲ್ಕೂ ಸ್ಥಳಗಳಲ್ಲಿ ವಾರದ ಸಂತೆಗಳು ನಡೆದು ವಸ್ತುಗಳ ವಿಕ್ರಯಕ್ಕೆ ಅನುಕೂಲವಿದೆ. ಹಲವು ಪಶುವೈದ್ಯಕೀಯ ಸಂಸ್ಥೆಗಳಿವೆ. ವೃತ್ತಿ ಶಿಕ್ಷಣ ಸಂಸ್ಥೆ ನಾಗಮಂಗಲ. ಮಂಡ್ಯಗಳಲ್ಲಿವೆ. ಕೃಷಿಗೆ ಸಂಬಂಧಿಸಿದಂತೆ ಶಿಕ್ಷಣ ಸೌಲಭ್ಯವೂ ಇದೆ. ಶಿವಾರಗುಡ್ಡದಲ್ಲಿ ಡೆನ್ಮಾರ್ಕಿನ ಯೋಜನೆಯಂತೆ ತಾಂತ್ರಿಕ ಮತ್ತು ಸುಧಾರಿತ ಬೇಸಾಯ ಪದ್ಧತಿ ಹಾಗೂ ಕೋಳಿಸಾಕಣೆಯಲ್ಲಿ ತರಬೇತಿ ಕೊಡಲಾಗುತ್ತಿದೆ. ಸಂಪನ್ಮೂಲಗಳ ಸಾರ್ಥಕ ಬಳಕೆಗೆ ಇಂಥ ಮಾರ್ಗದರ್ಶನಗಳು ಅಗತ್ಯ.

ಬ್ಯಾಂಕಿಂಗ್ ಮತ್ತಿತರ ಸೌಲಭ್ಯಗಳು

ಕೈಗಾರಿಕೋದ್ಯಮಗಳು ತಲೆ ಎತ್ತಿ ನಿಲ್ಲಬೇಕಾದರೆ ಉದ್ಯಮಶೀಲರಿಗೆ ಸರ್ಕಾರದ ಜೊತೆ ವಾಣಿಜ್ಯ ಬ್ಯಾಂಕುಗಳ ಧನಸಹಾಯ ಅಗತ್ಯ. ಪಶುಪಾಲನೆಗೂ, ಕೃಷಿನಿರತ ಜನರಿಗೆ ಉತ್ತಮ ಉಪಕರಣಗಳನ್ನು ಕೊಳ್ಳಲು, ಟ್ರ್ಯಾಕ್ಟರುಗಳನ್ನು ಕೊಳ್ಳಲೂ ಹಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕಾಗುತ್ತದೆ. ಸಾಲ ನೀಡುವ ಸಂಸ್ಥೆಗಳು, ಬ್ಯಾಂಕುಗಳು ಜಿಲ್ಲೆಯಲ್ಲಿದ್ದು ಈ ಕೊರತೆಯನ್ನು ನೀಗಿಸಿವೆ. ಆರ್ಥಿಕ ಸಹಾಯ ನೀಡಬಲ್ಲ 30ಕ್ಕೂ ಹೆಚ್ಚು ವಾಣಿಜ್ಯ ಬ್ಯಾಂಕುಗಳು ಇವೆ. ಭೂ ಅಭಿವೃದ್ಧಿ ಬ್ಯಾಂಕುಗಳು, ಕೈಗಾರಿಕಾ ಸಹಕಾರ ಬ್ಯಾಂಕು, ಕೃಷಿ ಸಾಲ ಸಹಕಾರ (Credit Co-operatives) ಸಂಘಗಳು, ಕೃಷಿಯೇತರ ಸಾಲ-ಸಂಘಗಳೂ ಇವೆ. ಸಣ್ಣ ಪ್ರಮಾಣದ ಕೈಗಾರಿಕಾ ಯೋಜನೆಗಳಿಗೆ ಕರ್ನಾಟಕ ಹಣಕಾಸು ನಿಗಮ ಸಾಲ ಸೌಲಭ್ಯ ನೀಡುತ್ತದೆ. ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗೆ, ಗೊಬ್ಬರ ಆನಿಲ ಯಂತ್ರಗಳ ಸ್ಥಾಪನೆಗೆ ರಾಜ್ಯ ಖಾದಿ ಗ್ರಾಮೋದ್ಯೋಗಗಳ ಮಂಡಳಿ ಮತ್ತು ಆಯೋಗಗಳು ನೆರವು, ಮಾರ್ಗದರ್ಶನ ನೀಡುತ್ತವೆ.

ರಾಜ್ಯ ಕೈಗಾರಿಕಾ ನಿರ್ದೇಶನಾಲಯವು ಪ್ರತಿ ಜಿಲ್ಲೆಯಲ್ಲೂ ಒಂದು ಕೇಂದ್ರವನ್ನು ತೆರೆದಿದ್ದು ಅದು ಹೊಸ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುತ್ತದೆ ಹಾಗೂ ನೀತಿ ನಿಯಮಗಳನ್ನು ತಿಳಿಸುತ್ತದೆ. ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವಿದ್ದು ಅದು ಪ್ರತಿ ಜಿಲ್ಲೆಗಳಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆಗಳನ್ನು ಕುರಿತು ಸಮೀಕ್ಷೆ ನಡೆಸಿದೆ.

ಪ್ರಸ್ತುತ, ಕರ್ನಾಟಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ವಿಶೇಷ ಸವಲತ್ತುಗಳನ್ನು ಕಲ್ಪಿಸಿಕೊಡಲಾಗಿದೆ. ಗ್ರಾಮೀಣ ಕುಶಲ ಕರ್ಮಿಗಳಿಗೆ ನೆರವಾಗುವ ಹೊಸ ನೀತಿಯನ್ನು ರೂಢಿಸಲು ಯತ್ನಿಸಲಾಗುತ್ತಿದೆ. ಸಾಂಪ್ರದಾಯಿಕ ಕಸುಬುಗಳು ಮೂಲೆಗುಂಪಾಗುವುದನ್ನು ತಡೆಯುವುದು ಇದರ ಉದ್ದೇಶವಾಗಿದೆ. ಗ್ರಾಮೀಣ ಕುಶಲಕರ್ಮಿಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ವಸತಿ ಮತ್ತು ಕಾರ್ಯಾಗಾರಗಳನ್ನು ನಿರ್ಮಿಸಿಕೊಡುವುದು, ಕಸಬುಗಳಿಗೆ ಅಗತ್ಯವಾದ ಸಲಕರಣೆಗಳನ್ನೊದಗಿಸುವುದು, ಕಚ್ಚಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲು ಸರಬರಾಜು ಮಾಡುವದು, ಉತ್ಪನ್ನಗಳಿಗೆ ಮಾರುಕಟ್ಟೆಗಳನ್ನು ಒದಗಿಸುವುದು ಹೊಸ ಯೋಜನೆಯ ಪ್ರಮುಖ ಅಂಶಗಳಾಗಿವೆ. ಹಣಕಾಸು ನಿಗಮದ ಶಾಖೆಯನ್ನು ಜಿಲ್ಲೆಗೊಂದರಂತೆ ತೆಗೆಯುವ ಅವಕಾಶ ಕಲ್ಪಿಸಿರುವುದರಿಂದ ಜಿಲ್ಲೆಗಳಲ್ಲಿ ಉದ್ಯಮವನ್ನು ಸ್ಥಾಪಿಸಲು ಬಯಸುವವರಿಗೆ ಸ್ಥಳೀಯವಾಗಿ ಎಲ್ಲ ಸೌಕರ್ಯ ಸೌಲಭ್ಯಗಳು ನಿಗಮದ ಮೂಲಕ ಒದಗಲಿವೆ. ನಿಗಮದ ಶಾಖೆಗಳನ್ನು ತೆಗೆಯುವ ಯೋಜನೆಗೆ ಚಿಕ್ಕಮಗಳೂರು, ಕೊಡಗು, ಮಂಡ್ಯ ಹಾಗೂ ಕೋಲಾರ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಇದರಿಂದ ಮಂಡ್ಯ ಜಿಲ್ಲೆಯ ಕೈಗಾರಿಕಾ ಕ್ಷೇತ್ರಕ್ಕೆ ಒಂದು ಹೊಸ ಆಯಾಮ ದೊರೆತಂತಾಗುವುದು.

ಅವಕಾಶಗಳನ್ನು ಉಪಯೋಗಿಸಿಕೊಳ್ಳುವ ಉದ್ಯಮಶೀಲರ, ವಿದ್ಯಾವಂತರ ತಂಡ ನಿರ್ಮಾಣವಾಗಬೇಕಾಗಿದೆ ಎಂಬುದು ಸ್ಪಷ್ಟ. ಸಂಪನ್ಮೂಲಗಳನ್ನಾಧರಿಸಿದ ಹಾಗೂ ಬೇಡಿಕೆಗಳಿಗನುಸಾರವಾದ ಕೈಗಾರಿಕೆಗಳ ಸ್ಥಾಪನೆಗೆ ಭವಿಷ್ಯದಲ್ಲಿ ಒಳ್ಳೆ ಅವಕಾಶಗಳಿರುತ್ತವೆ. ಉದ್ಯೋಗಾವಕಾಶಗಳೂ ಇದರಿಂದ ಹುಟ್ಟುತ್ತವೆ. ಮಂಡ್ಯ ಜಿಲ್ಲೆ ಪ್ರಯೋಗಶೀಲವಾಗಬೇಕು. ಆಗ ಸಕ್ಕರೆಯ ಸೀಮೆಯಾದುದರ ಜೊತೆಗೆ ಅಕ್ಕರೆಯ ಸೀಮೆಯೂ ಆಗುತ್ತದೆ.

Sri Vidyabharathi Book Centre, Sringeri